ಸೂ. 128 **16. ಅನ್ನಹ್ಲ್** ರು. 16

اٰيَاتُهَا ١٢٨ سُوْرَةُ النَّحْلِ مَكِّيَّةٌ رُكُوْعَاتُهَا ١٦

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಅಲ್ಲಾಹನ ವಿಧಿ ಬಂದು ಬಿಟ್ಟಿತು.[1] ಇನ್ನು ಅದಕ್ಕಾಗಿ ಅವಸರ ಪಡಬೇಡಿರಿ. ಅವನು ಪರಮ ಪಾವನನು ಮತ್ತು ಇವರು ಮಾಡುತ್ತಿರುವ 'ದೇವಸಹಭಾಗಿತ್ವಕ್ಕಿಂತ' ಮಹೋನ್ನತನು.

اَتٰۤى اَمْرُ اللّٰهِ فَلَا تَسْتَعْجِلُوْهُ ؕ سُبْحٰنَهٗ وَتَعٰلٰى عَمَّا يُشْرِكُوْنَ ①

2. ಅವನು ಈ 'ರೂಹ್' ಅನ್ನು[2] ತನಗೆ ಇಷ್ಟ ಬಂದ ದಾಸನ ಮೇಲೆ ತನ್ನ ಅನುಜ್ಞೆಯಿಂದ ದೇವಚರರ ಮುಖಾಂತರ ಅವತೀರ್ಣ ಗೊಳಿಸಿಬಿಡುತ್ತಾನೆ. (ಇದು) "ನನ್ನ ಹೊರತು ಯಾರೂ ನಿಮ್ಮ ಆರಾಧ್ಯನಿಲ್ಲ. ಆದುದರಿಂದ ನೀವು ನನ್ನನ್ನೇ ಭಯಪಡಿರಿ, ಎಂದು ಜನರನ್ನು ಎಚ್ಚರಿಸಿರಿ" (ಎಂಬ ಆದೇಶ ಸಹಿತ ವಾಗಿರುತ್ತದೆ).

يُنَزِّلُ الْمَلٰٓئِكَةَ بِالرُّوْحِ مِنْ اَمْرِهٖ عَلٰى مَنْ يَّشَآءُ مِنْ عِبَادِهٖۤ اَنْ اَنْذِرُوْۤا اَنَّهٗ لَاۤ اِلٰهَ اِلَّاۤ اَنَا فَاتَّقُوْنِ ②

3. ಅವನು ಆಕಾಶಗಳನ್ನೂ ಭೂಮಿಯನ್ನೂ ಸತ್ಯಪೂರ್ಣವಾಗಿ ಸೃಷ್ಟಿಸಿರುತ್ತಾನೆ. ಇವರು ಮಾಡುವ 'ದೇವಸಹಭಾಗಿತ್ವಕ್ಕಿಂತ' ಅವನು ಮಹೋನ್ನತನು.

خَلَقَ السَّمٰوٰتِ وَالْاَرْضَ بِالْحَقِّ ؕ تَعٰلٰى عَمَّا يُشْرِكُوْنَ ③

4. ಅವನು ಮಾನವನನ್ನು ಬರೇ ಒಂದು ವೀರ್ಯಾಣುವಿನಿಂದ

خَلَقَ الْاِنْسَانَ مِنْ نُّطْفَةٍ فَاِذَا هُوَ

---

1. ಅರ್ಥಾತ್- ಅದು ಗೋಚರವಾಗುವ ಮತ್ತು ಜಾರಿಗೊಳ್ಳುವ ಕಾಲ ಹತ್ತಿರವೇ ಇದೆ. ಪ್ರಾಯಶಃ ಇಲ್ಲಿ ತೀರ್ಮಾನವೆಂದು ಹೇಳಲಾಗಿರುವುದು ಪ್ರವಾದಿವರ್ಯರು(ಸ) ಮಕ್ಕಾದಿಂದ ವಲಸೆ ಹೋಗುವುದರ ಕುರಿತಾಗಿದೆ. ಈ ಸೂಕ್ತ ಬಂದ ಸ್ವಲ್ಪ ಕಾಲದ ನಂತರವೇ ಅದರ ಆಜ್ಞೆ ನೀಡಲಾಯಿತು. ಪ್ರವಾದಿಗಳು ಯಾವ ಜನಾಂಗದ ಮಧ್ಯೆ ತಮ್ಮ ದೌತ್ಯವನ್ನು ನಿರ್ವಹಿಸುತ್ತಾರೋ ಆ ಜನಾಂಗ ಆಜ್ಞೋಲ್ಲಂಘನೆಯ ಚರಮ ಸೀಮೆಗೆ ತಲಪಿದಾಗ ಪ್ರವಾದಿಗೆ ವಲಸೆ ಹೋಗುವ ಆಜ್ಞೆ ನೀಡಲಾಗುತ್ತದೆ ಎಂದು ಕುರ್ಆನಿನ ಅಧ್ಯಯನದಿಂದ ನಮಗೆ ವ್ಯಕ್ತವಾಗುತ್ತದೆ. ಈ ಆಜ್ಞೆ ಆ ಜನಾಂಗದ ಭವಿಷ್ಯದ ಬಗ್ಗೆ ತೀರ್ಮಾನವನ್ನೂ ಮಾಡಿಬಿಡುತ್ತದೆ. ಅನಂತರ ಅವರ ಮೇಲೆ ವಿನಾಶಕಾರಿ ಯಾತನೆ ಎರಗುತ್ತದೆ. ಇಲ್ಲವೇ ಪ್ರವಾದಿ ಮತ್ತು ಅವರ ಅನುಯಾಯಿಗಳ ಮೂಲಕ ಅವರ ಮೂಲೋತ್ಪಾಟನೆಯಾಗುತ್ತದೆ.
2. ಇಲ್ಲಿ 'ರೂಹ್' ಎಂದರೆ ಪ್ರವಾದಿತ್ವದ ಸ್ಫೂರ್ತಿ ಮತ್ತು ದಿವ್ಯವಾಣಿ. ಪ್ರವಾದಿಗಳ ನಡೆ-ನುಡಿಗಳೆಲ್ಲವೂ ಇವುಗಳಿಂದ ಕೂಡಿರುತ್ತದೆ.

ಸೃಷ್ಟಿಸಿದನು ಮತ್ತು ನೋಡುತ್ತಿದ್ದ ಹಾಗೆ ಅವನೊಬ್ಬ ಪ್ರತ್ಯಕ್ಷ ಜಗಳಗಂಟನಾಗಿ ಮಾರ್ಪಟ್ಟನು.[3]

خَصِيمٌ مُّبِينٌ ﴿٤﴾

5. ಅವನು (ಅರ್ಥಾತ್ ಅಲ್ಲಾಹನು) ಪ್ರಾಣಿಗಳನ್ನು ಸೃಷ್ಟಿಸಿದನು. ಅವುಗಳಲ್ಲಿ ನಿಮಗೆ ಉಡುಪೂ ಆಹಾರವೂ ಇನ್ನೂ ನಾನಾ ವಿಧದ ಇತರ ಪ್ರಯೋಜನಗಳೂ ಇವೆ.

وَالْأَنْعَامَ خَلَقَهَا ۗ لَكُمْ فِيهَا دِفْءٌ
وَمَنَافِعُ وَمِنْهَا تَأْكُلُونَ ﴿٥﴾

6. ನೀವು ಮುಂಜಾನೆ ಅವುಗಳನ್ನು ಮೇವಿಗೆ ಬಿಡುವಾಗಲೂ ಸಂಜೆ ಅವುಗಳನ್ನು ಮರಳಿ ತರುವಾಗಲೂ ನಿಮಗೆ ಅವುಗಳಲ್ಲಿ ಸೊಬಗಿದೆ.

وَلَكُمْ فِيهَا جَمَالٌ حِينَ تُرِيحُونَ
وَحِينَ تَسْرَحُونَ ﴿٦﴾

7. ಅವು ನಿಮಗಾಗಿ ಹೊರೆಯನ್ನು ಹೊತ್ತುಕೊಂಡು, ನೀವು ಅತ್ಯಂತ ಪರಿಶ್ರಮ ಪಡದೆ ತಲುಪಲಾಗದಂತಹ ಸ್ಥಳಗಳಿಗೆ ಒಯ್ಯುತ್ತವೆ. ವಾಸ್ತವದಲ್ಲಿ ನಿಮ್ಮ ಪ್ರಭು ಮಹಾ ವತ್ಸಲನೂ ಕರುಣಾನಿಧಿಯೂ ಆಗಿರುತ್ತಾನೆ.

وَتَحْمِلُ أَثْقَالَكُمْ إِلَىٰ بَلَدٍ لَّمْ تَكُونُوا
بَالِغِيهِ إِلَّا بِشِقِّ الْأَنفُسِ ۚ إِنَّ رَبَّكُمْ
لَرَءُوفٌ رَّحِيمٌ ﴿٧﴾

8. ಅವನು ಕುದುರೆಗಳನ್ನೂ ಹೇಸರಕತ್ತೆಗಳನ್ನೂ ಕತ್ತೆಗಳನ್ನೂ ನಿಮ್ಮ ಸವಾರಿಗಾಗಿಯೂ ಅವು ನಿಮ್ಮ ಜೀವನದ ಶೋಭೆಯಾಗುವಂತೆಯೂ ಸೃಷ್ಟಿಸಿದನು. ನಿಮಗೆ ಗೊತ್ತೇ ಇಲ್ಲದ ಇನ್ನೂ ಅನೇಕ ವಸ್ತುಗಳನ್ನು ಅವನು (ನಿಮ್ಮ ಪ್ರಯೋಜನಕ್ಕಾಗಿ) ಸೃಷ್ಟಿಸುತ್ತಾನೆ.[4]

وَالْخَيْلَ وَالْبِغَالَ وَالْحَمِيرَ لِتَرْكَبُوهَا
وَزِينَةً ۚ وَيَخْلُقُ مَا لَا تَعْلَمُونَ ﴿٨﴾

9. ಅಡ್ಡ ಮಾರ್ಗಗಳೂ ಇರುವಾಗ ನೇರ ಮಾರ್ಗವನ್ನು ತೋರಿಸುವ ಹೊಣೆ ಅಲ್ಲಾಹನ ಮೇಲೆಯೇ ಇದೆ. ಅವನು ಇಚ್ಛಿಸುತ್ತಿದ್ದರೆ ನಿಮಗೆಲ್ಲರಿಗೂ ಸನ್ಮಾರ್ಗದರ್ಶನ ಮಾಡುತ್ತಿದ್ದನು.

وَعَلَى اللَّهِ قَصْدُ السَّبِيلِ وَمِنْهَا جَائِرٌ ۚ
وَلَوْ شَاءَ لَهَدَاكُمْ أَجْمَعِينَ ﴿٩﴾

10. ಅವನೇ ನಿಮಗಾಗಿ ಆಕಾಶದಿಂದ ನೀರನ್ನು ಸುರಿಸಿದನು. ಅದನ್ನು ನೀವು ಸ್ವತಃ ಕುಡಿಯುತ್ತೀರಿ ಮತ್ತು ಅದರಿಂದ ನಿಮ್ಮ ಪ್ರಾಣಿಗಳಿಗೆ ಮೇವೂ ಉಂಟಾಗುತ್ತದೆ.

هُوَ الَّذِي أَنزَلَ مِنَ السَّمَاءِ مَاءً ۖ لَّكُم
مِّنْهُ شَرَابٌ وَمِنْهُ شَجَرٌ فِيهِ تُسِيمُونَ ﴿١٠﴾

3. ಇದನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು. ಪ್ರಾಯಶಃ ಎರಡು ಅರ್ಥಗಳೂ ಇದಕ್ಕೆ ಅನ್ವಯವಾಗುತ್ತದೆ. ಮೊದಲನೆಯದಾಗಿ ಸಂವಾದ ನಡೆಸಲು ಅರ್ಹವಾದ ಮತ್ತು ತನ್ನ ಇಂಗಿತಕ್ಕೆ ಆಧಾರ ಪ್ರಮಾಣಗಳನ್ನು ಒದಗಿಸಲು ಸಮರ್ಥನಾದ ಆ ಮಾನವನನ್ನು ಅಲ್ಲಾಹನು ಅತ್ಯಂತ ನಿಕೃಷ್ಟವಾದ ವೀರ್ಯದ ಬಿಂದುವಿನಿಂದ ಸೃಷ್ಟಿಸಿದನು. ಎರಡನೆಯದಾಗಿ ಅಲ್ಲಾಹನು ವೀರ್ಯದಂತಹ ನಿಕೃಷ್ಟ ವಸ್ತುವಿನಿಂದ ಸೃಷ್ಟಿಸಿದ ಮಾನವನ ಆತ್ಮಪ್ರತಿಷ್ಠೆಯ ಅತಿರೇಕವನ್ನು ನೋಡಿ! ಅವನು ಸ್ವತಃ ದೇವನೊಡನೆಯೇ ಜಗಳ ಕಾಯಲು ಸಿದ್ಧನಾಗಿ ನಿಂತಿದ್ದಾನೆ.

4. ಅರ್ಥಾತ್- ಮಾನವನ ಹಿತಕ್ಕಾಗಿ ಕಾರ್ಯವೆಸಗುತ್ತಿರುವ ಅಸಂಖ್ಯ ವಿಷಯಗಳು. ಎಲ್ಲಿ ಎಷ್ಟು ಪ್ರಮಾಣದ ಸೇವಕರು ಅವನ ಸೇವೆಗೆಯ್ಯುತ್ತಿದ್ದಾರೆ ಮತ್ತು ಆ ಸೇವೆಯ ಸ್ವರೂಪ ಎಂತಹುದು ಎಂಬ ಬಗ್ಗೆಯೂ ಅವನಿಗೆ ತಿಳುವಳಿಕೆಯಿಲ್ಲ.

11. ಅವನು ಈ ನೀರಿನ ಮೂಲಕ ಬೆಳೆ ಬೆಳೆಯಿಸುತ್ತಾನೆ. ಝೈತೂನ್ (ಜೀತ ವೃಕ್ಷ), ಖರ್ಜೂರ, ದ್ರಾಕ್ಷಿ ಮತ್ತು ಇತರ ನಾನಾ ವಿಧದ ಫಲಗಳನ್ನು ಉತ್ಪಾದಿಸುತ್ತಾನೆ. ವಿವೇಚಿಸುವವರಿಗೆ ನಿಶ್ಚಯ ವಾಗಿಯೂ ಇದರಲ್ಲಿ ಒಂದು ದೊಡ್ಡ ನಿದರ್ಶನವಿದೆ.

يُنۢبِتُ لَكُم بِهِ ٱلزَّرْعَ وَٱلزَّيْتُونَ وَٱلنَّخِيلَ وَٱلْأَعْنَـٰبَ وَمِن كُلِّ ٱلثَّمَرَٰتِ ۗ إِنَّ فِى ذَٰلِكَ لَـَٔايَةً لِّقَوْمٍ يَتَفَكَّرُونَ ﴿١١﴾

12. ಅವನು ನಿಮಗಾಗಿ ಇರುಳು ಹಗಲುಗಳನ್ನೂ ಸೂರ್ಯ ಚಂದ್ರ ರನ್ನೂ ನಿಯಂತ್ರಿಸಿರುತ್ತಾನೆ. ಎಲ್ಲಾ ನಕ್ಷತ್ರಗಳೂ ಅವನ ಅಪ್ಪಣೆ ಯಿಂದ ನಿಯಂತ್ರಿತವಾಗಿವೆ. ಬುದ್ಧಿಜೀವಿಗಳಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ.

وَسَخَّرَ لَكُمُ ٱلَّيْلَ وَٱلنَّهَارَ وَٱلشَّمْسَ وَٱلْقَمَرَ ۖ وَٱلنُّجُومُ مُسَخَّرَٰتٌۢ بِأَمْرِهِۦٓ ۗ إِنَّ فِى ذَٰلِكَ لَـَٔايَـٰتٍ لِّقَوْمٍ يَعْقِلُونَ ﴿١٢﴾

13. ಅವನು ನಿಮಗಾಗಿ ಭೂಮಿಯಲ್ಲಿ ಸೃಷ್ಟಿಸಿರುವ ವಿವಿಧ ಬಣ್ಣಗಳ ವಸ್ತುಗಳಲ್ಲಿಯೂ ಗ್ರಹಿಸುವವರಿಗೆ ಖಂಡಿತವಾಗಿಯೂ ನಿದರ್ಶನ ವಿದೆ.

وَمَا ذَرَأَ لَكُمْ فِى ٱلْأَرْضِ مُخْتَلِفًا أَلْوَٰنُهُۥٓ ۗ إِنَّ فِى ذَٰلِكَ لَـَٔايَةً لِّقَوْمٍ يَذَّكَّرُونَ ﴿١٣﴾

14. ನಿಮಗಾಗಿ ಸಮುದ್ರಗಳನ್ನು ನಿಯಂತ್ರಿಸಿ ನೀವು ಅದರಿಂದ ತಾಜಾ ಮಾಂಸ ಪಡೆದು ತಿನ್ನಲಾಗುವಂತೆಯೂ ಅದರಿಂದ ನೀವು ಧರಿಸುವ ಅಲಂಕಾರ ಸಾಧನಗಳನ್ನು ಹೊರ ತೆಗೆಯುವಂತೆಯೂ ಮಾಡಿದವನು ಅವನೇ. ನಾವೆಯು ಸಮುದ್ರದ ಹೃದಯವನ್ನು ಸೀಳುತ್ತ ಸಾಗುತ್ತಿರುವುದನ್ನು ನೀವು ನೋಡುತ್ತೀರಿ. ಇವೆಲ್ಲ ನೀವು ನಿಮ್ಮ ಪ್ರಭುವಿನ ಅನುಗ್ರಹವನ್ನು ಅರಸಲಿಕ್ಕೂ[5] ಅವನಿಗೆ ಕೃತಜ್ಞರಾಗಲಿಕ್ಕೂ ಆಗಿರುತ್ತದೆ.

وَهُوَ ٱلَّذِى سَخَّرَ ٱلْبَحْرَ لِتَأْكُلُوا۟ مِنْهُ لَحْمًا طَرِيًّا وَتَسْتَخْرِجُوا۟ مِنْهُ حِلْيَةً تَلْبَسُونَهَا ۖ وَتَرَى ٱلْفُلْكَ مَوَاخِرَ فِيهِ وَلِتَبْتَغُوا۟ مِن فَضْلِهِۦ وَلَعَلَّكُمْ تَشْكُرُونَ ﴿١٤﴾

15. ಭೂಮಿಯು ನಿಮ್ಮನ್ನೆತ್ತಿಕೊಂಡು ಅಲುಗಾಡದಂತೆ ಅವನು ಭೂಮಿಯಲ್ಲಿ ಪರ್ವತಗಳನ್ನು ನಾಟಿ ಬಿಟ್ಟಿರುತ್ತಾನೆ. ನೀವು ದಾರಿಗಾಣಲಿಕ್ಕೂ ಅವನು ನದಿಗಳನ್ನು ಹರಿಸಿದನು ಮತ್ತು ಸ್ವಾಭಾವಿಕವಾದ ಮಾರ್ಗಗಳನ್ನು ಮಾಡಿದನು.

وَأَلْقَىٰ فِى ٱلْأَرْضِ رَوَٰسِىَ أَن تَمِيدَ بِكُمْ وَأَنْهَـٰرًا وَسُبُلًا لَّعَلَّكُمْ تَهْتَدُونَ ﴿١٥﴾

16. ಅವನು ಭೂಮಿಯಲ್ಲಿ ಮಾರ್ಗಗಳನ್ನು ತೋರಿಸುವ ಕುರುಹು ಗಳನ್ನಿರಿಸಿದನು ಮತ್ತು ಜನರು ನಕ್ಷತ್ರಗಳಿಂದಲೂ ದಾರಿ ಗಾಣುತ್ತಾರೆ.

وَعَلَـٰمَـٰتٍ ۚ وَبِٱلنَّجْمِ هُمْ يَهْتَدُونَ ﴿١٦﴾

17. ಹೀಗಿರುವಾಗ ಸೃಷ್ಟಿಸುವಾತನೂ ಏನನ್ನೂ ಸೃಷ್ಟಿಸದವರೂ ಸಮಾನರೇ? ನೀವೇನು ವಿವೇಚಿಸುವುದಿಲ್ಲವೇ?

أَفَمَن يَخْلُقُ كَمَن لَّا يَخْلُقُ ۗ أَفَلَا تَذَكَّرُونَ ﴿١٧﴾

5. ಅರ್ಥಾತ್- ಸಿಂಧುವಾದ ಮಾರ್ಗದಿಂದ ನಿಮ್ಮ ಜೀವನಾಧಾರವನ್ನು ಪಡೆಯಲು ಪ್ರಯತ್ನಿಸಿರಿ.

18. ನೀವು ಅಲ್ಲಾಹನ ಅನುಗ್ರಹಗಳನ್ನು ಎಣಿಕೆ ಮಾಡಲಿಚ್ಛಿಸಿದರೂ ಎಣಿಕೆ ಮಾಡಲಾರಿರಿ. ವಾಸ್ತವದಲ್ಲಿ ಅವನು ಮಹಾ ಕ್ಷಮಾ ಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

وَإِن تَعُدُّوا نِعْمَةَ اللَّهِ لَا تُحْصُوهَا ۗ
إِنَّ اللَّهَ لَغَفُورٌ رَّحِيمٌ ﴿١٨﴾

19. ವಸ್ತುತಃ ನೀವು ಬಹಿರಂಗಗೊಳಿಸುವುದನ್ನೂ ಮುಚ್ಚಿಡುವುದನ್ನೂ ಅಲ್ಲಾಹನು ಬಲ್ಲವನಾಗಿರುತ್ತಾನೆ.

وَاللَّهُ يَعْلَمُ مَا تُسِرُّونَ وَمَا تُعْلِنُونَ ﴿١٩﴾

20. ಇವರು ಅಲ್ಲಾಹನನ್ನು ಬಿಟ್ಟು ಇತರ ಯಾರನ್ನು ಕೂಗಿ ಪ್ರಾರ್ಥಿಸುತ್ತಿರುವರೋ ಅವರು ಯಾವುದೇ ವಸ್ತುವಿನ ಸೃಷ್ಟಿ ಕರ್ತರಲ್ಲ. ನಿಜವಾಗಿ ಅವರು ಸ್ವತಃ ಸೃಷ್ಟಿಗಳು.

وَالَّذِينَ يَدْعُونَ مِن دُونِ اللَّهِ لَا
يَخْلُقُونَ شَيْئًا وَهُمْ يُخْلَقُونَ ﴿٢٠﴾

21. ಅವರು ನಿರ್ಜೀವಿಗಳು, ಸಜೀವಿಗಳಲ್ಲ. ಅವರನ್ನು ಯಾವಾಗ (ಪುನಃ ಜೀವಂತಗೊಳಿಸಿ) ಎಬ್ಬಿಸಲಾಗುವುದೆಂದು ಅವರಿಗೆ ತಿಳಿದಿರುವುದಿಲ್ಲ.[6]

أَمْوَاتٌ غَيْرُ أَحْيَاءٍ ۖ وَمَا يَشْعُرُونَ ۙ
أَيَّانَ يُبْعَثُونَ ﴿٢١﴾

22. ನಿಮ್ಮ ಆರಾಧ್ಯನು ಕೇವಲ ಏಕ ಆರಾಧ್ಯನು. ಆದರೆ ಪರಲೋಕದ ಮೇಲೆ ವಿಶ್ವಾಸ ವಿರಿಸದವರ ಹೃದಯಗಳಲ್ಲಿ ನಿರಾಕರಣೆಯು ನೆಲೆನಿಂತು ಬಿಟ್ಟಿದೆ ಮತ್ತು ಅವರು ಗರ್ವಿಷ್ಠರಾಗಿದ್ದಾರೆ.

إِلَٰهُكُمْ إِلَٰهٌ وَاحِدٌ ۚ فَالَّذِينَ لَا يُؤْمِنُونَ
بِالْآخِرَةِ قُلُوبُهُم مُّنكِرَةٌ وَهُم
مُّسْتَكْبِرُونَ ﴿٢٢﴾

23. ನಿಶ್ಚಯವಾಗಿಯೂ ಅಲ್ಲಾಹನು ಇವರು ಮುಚ್ಚಿಡುವ ಮತ್ತು ಬಹಿರಂಗಗೊಳಿಸುವ ಸರ್ವ ಕರ್ಮಗಳನ್ನು ಅರಿಯುತ್ತಾನೆ. ಅಹಂಭಾವದಲ್ಲಿ ಸಿಲುಕಿರುವವರನ್ನು ಖಂಡಿತವಾಗಿಯೂ ಅಲ್ಲಾಹನು ಮೆಚ್ಚುವುದಿಲ್ಲ.

لَا جَرَمَ أَنَّ اللَّهَ يَعْلَمُ مَا يُسِرُّونَ وَمَا
يُعْلِنُونَ ۚ إِنَّهُ لَا يُحِبُّ الْمُسْتَكْبِرِينَ ﴿٢٣﴾

24. ನಿಮ್ಮ ಪ್ರಭು ಅವತೀರ್ಣಗೊಳಿಸಿರುವುದು ಏನನ್ನು ಎಂದು ಅವರೊಡನೆ ಯಾರಾದರೂ ಕೇಳಿದರೆ,[7] "ಅದೆಲ್ಲಾ ಹಿಂದಿನ ಕಾಲದ ಹಳಸಲು ಕತೆಗಳು" ಎಂದು ಇವರು ಹೇಳುತ್ತಾರೆ-

وَإِذَا قِيلَ لَهُم مَّاذَا أَنزَلَ رَبُّكُمْ ۙ
قَالُوا أَسَاطِيرُ الْأَوَّلِينَ ﴿٢٤﴾

25. ಪುನರುತ್ಥಾನ ದಿನದಂದು ತಮ್ಮ ಪೂರ್ಣ ಹೊರೆಯನ್ನು ಹೊರಲಿಕ್ಕಾಗಿಯೂ ಅದರೊಂದಿಗೇ ಅಜ್ಞಾನದಿಂದಾಗಿ ಇವರು

لِيَحْمِلُوا أَوْزَارَهُمْ كَامِلَةً يَوْمَ الْقِيَامَةِ ۙ
وَمِنْ أَوْزَارِ الَّذِينَ يُضِلُّونَهُم بِغَيْرِ

6. ಇಲ್ಲಿ ಪ್ರಸ್ತಾವಿಸಲಾಗಿರುವ ಸ್ವಯಂಕೃತ ಆರಾಧ್ಯರುಗಳು ಮೃತಪಟ್ಟ ಮಾನವರಾಗಿದ್ದಾರೆ ಎಂದು ಈ ಪದಗಳಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ದೇವಚರರು ಜೀವಂತವಿದ್ದಾರೆ ಅವರು ಮೃತಪಟ್ಟಿಲ್ಲ. ಇನ್ನು ಮರ ಹಾಗೂ ಶಿಲೆಗಳ ಮೂಲಕ ಮಾಡಲ್ಪಟ್ಟ ವಿಗ್ರಹಗಳು ಮತ್ತೆ ಜೀವಂತಗೊಳಿಸಿ ಎಬ್ಬಿಸಲ್ಪಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

7. ಅರೇಬಿಯಾದಲ್ಲಿ ಪ್ರವಾದಿವರ್ಯರ(ಸ) ಬಗ್ಗೆ ಚರ್ಚೆಗಳು ನಡೆಯುತ್ತಿದ್ದಾಗ ಹೊರಗಿನ ಜನರು ಮಕ್ಕಾದ ಜನರೊಡನೆ ಪ್ರವಾದಿಯ ಮತ್ತು ಕುರ್‌ಆನಿನ ಕುರಿತು ಪ್ರಶ್ನೆಗಳನ್ನು ಕೇಳುತ್ತಿದ್ದರು.

عِلۡمٍؕ اَلَا سَآءَ مَا يَزِرُوۡنَ ۝٢٥

ಯಾರನ್ನು ಪಥಭ್ರಷ್ಟಗೊಳಿಸಿರುತ್ತಾರೋ ಅವರ ಒಂದಿಷ್ಟು ಹೊರೆಯನ್ನೂ ಶೇಖರಿಸಿಕೊಳ್ಳಲಿಕ್ಕಾಗಿಯೂ ಇವರು ಹೀಗೆ ಹೇಳುತ್ತಾರೆ. ನೋಡಿರಿ, ಇವರು ಅದೆಂತಹ ಕಠಿಣ ಹೊರೆಯನ್ನು ತಮ್ಮ ಮೇಲೆ ಹೇರಿಕೊಳ್ಳುತ್ತಿದ್ದಾರೆ.

قَدۡ مَكَرَ الَّذِيۡنَ مِنۡ قَبۡلِهِمۡ فَاَتَى اللّٰهُ
بُنۡيَانَهُمۡ مِّنَ الۡقَوَاعِدِ فَخَرَّ عَلَيۡهِمُ
السَّقۡفُ مِنۡ فَوۡقِهِمۡ وَاَتٰٮهُمُ الۡعَذَابُ
مِنۡ حَيۡثُ لَا يَشۡعُرُوۡنَ ۝٢٦

26. ಇವರಿಗಿಂತ ಮುಂಚೆಯೂ ಅನೇಕರು (ಸತ್ಯವನ್ನು ಹೀನೈಸಲಿಕ್ಕಾಗಿ) ಇದೇ ರೀತಿಯ ಕುತಂತ್ರಗಳನ್ನು ಮಾಡಿರುತ್ತಾರೆ. ಆದರೆ ಅಲ್ಲಾಹನು ಅವರ ಕುತಂತ್ರದ ಕಟ್ಟಡವನ್ನು ಬುಡದಿಂದಲೇ ಕಿತ್ತೆಸೆದನು ಮತ್ತು ಮೇಲಿಂದ ಅದರ ಮಾಡು ಅವರ ತಲೆಯ ಮೇಲೆಯೇ ಮಗುಚಿ ಬಿತ್ತು. ಅವರು ನಿರೀಕ್ಷಿಸಿಯೂ ಇರದಂತಹ ದಿಕ್ಕಿನಿಂದ ಅವರ ಮೇಲೆ ಯಾತನೆ ಎರಗಿತು.

ثُمَّ يَوۡمَ الۡقِيٰمَةِ يُخۡزِيۡهِمۡ وَيَقُوۡلُ
اَيۡنَ شُرَكَآءِىَ الَّذِيۡنَ كُنۡتُمۡ تُشَآقُّوۡنَ
فِيۡهِمۡ‌ؕ قَالَ الَّذِيۡنَ اُوۡتُوا الۡعِلۡمَ اِنَّ
الۡخِزۡىَ الۡيَوۡمَ وَالسُّوۡۤءَ عَلَى الۡكٰفِرِيۡنَۙ ۝٢٧

27. ಮುಂದೆ ಪುನರುತ್ಥಾನ ದಿನದಂದು ಅಲ್ಲಾಹನು ಅವರನ್ನು ಅಪಮಾನಗೊಳಿಸುವನು ಮತ್ತು ಅವರೊಡನೆ, "ನನ್ನ ಯಾವ ಸಹಭಾಗಿಗಳಿಗೋಸ್ಕರ ನೀವು (ಸತ್ಯಸಂಧರೊಡನೆ) ಜಗಳವಾಡುತ್ತಿದ್ದಿರೋ ಅವರೀಗ ಎಲ್ಲಿದ್ದಾರೆ?" ಎಂದು ಕೇಳುವನು. ಭೂಲೋಕದಲ್ಲಿ ಜ್ಞಾನ ಪ್ರಾಪ್ತವಾಗಿದ್ದವರು, "ಇಂದು ನಿಶ್ಚಯವಾಗಿಯೂ ಸತ್ಯನಿಷೇಧಿಗಳಿಗೆ ಅಪಮಾನವೂ ದುರ್ದೆಶೆಯೂ ಇದೆ" ಎನ್ನುವರು.

الَّذِيۡنَ تَتَوَفّٰٮهُمُ الۡمَلٰٓٮِٕكَةُ ظَالِمِىۡۤ
اَنۡفُسِهِمۡ‌ فَاَلۡقَوُا السَّلَمَ مَا كُنَّا نَعۡمَلُ
مِنۡ سُوۡۤءٍ‌ؕ بَلٰٓى اِنَّ اللّٰهَ عَلِيۡمٌۢ بِمَا
كُنۡتُمۡ تَعۡمَلُوۡنَ ۝٢٨

28. ಅಹುದು, ಈ ಸತ್ಯನಿಷೇಧಿಗಳು ತಮ್ಮ ಮೇಲೆ ತಾವೇ ಅಕ್ರಮವೆಸಗುತ್ತಿರುವ ವೇಳೆ ದೇವಚರರ ಕೈಯಲ್ಲಿ ಸೆರೆಸಿಕ್ಕಿದಾಗ (ಹಟಮಾರಿತನವನ್ನು ಬಿಟ್ಟು) ತಕ್ಷಣ ಶರಣು ಹೋಗುತ್ತಾರೆ ಮತ್ತು "ನಾವೇನೂ ದುಷ್ಕರ್ಮವೆಸಗುತ್ತಿರಲಿಲ್ಲ" ಎಂದು ಹೇಳುತ್ತಾರೆ. ಆಗ ದೇವಚರರು, "ಏಕಿಲ್ಲ? ಅಲ್ಲಾಹನು ನೀವು ಮಾಡುತ್ತಿದ್ದ ನಿಮ್ಮ ದುಷ್ಕರ್ಮಗಳನ್ನು ಚೆನ್ನಾಗಿ ಬಲ್ಲವ ನಾಗಿರುತ್ತಾನೆ.

فَادۡخُلُوۡۤا اَبۡوَابَ جَهَنَّمَ خٰلِدِيۡنَ فِيۡهَا‌ؕ
فَلَبِئۡسَ مَثۡوَى الۡمُتَكَبِّرِيۡنَ ۝٢٩

29. ಈಗ ನರಕ ದ್ವಾರಗಳೊಳಗೆ ನುಗ್ಗಿರಿ. ನಿಮಗೆ ಸದಾ ಇಲ್ಲೇ ಇರಬೇಕಾಗಿದೆ" ಎಂದು ಉತ್ತರ ಕೊಡುವರು. ಒಟ್ಟಿನಲ್ಲಿ ಅಹಂಕಾರಿಗಳ ವಾಸಸ್ಥಾನವು ಅತ್ಯಂತ ನಿಕೃಷ್ಟವಾಗಿದೆ.

وَقِيۡلَ لِلَّذِيۡنَ اتَّقَوۡا مَاذَاۤ اَنۡزَلَ رَبُّكُمۡ‌ؕ
قَالُوۡا خَيۡرًا‌ؕ لِلَّذِيۡنَ اَحۡسَنُوۡا فِىۡ هٰذِهِ
الدُّنۡيَا حَسَنَةٌ‌ ؕ وَلَدَارُ الۡاٰخِرَةِ خَيۡرٌ‌ ؕ

30. ನಿಮ್ಮ ಪ್ರಭುವಿನ ಕಡೆಯಿಂದ ಅವತೀರ್ಣಗೊಂಡಿರುವುದೇನೆಂದು ದೇವಭಯವುಳ್ಳವರೊಡನೆ ಕೇಳುವಾಗ ಅವರು, "ಅತ್ಯುತ್ತಮವಾದುದು ಅವತೀರ್ಣಗೊಂಡಿದೆ" ಎಂದು ಉತ್ತರ ಕೊಡುತ್ತಾರೆ. ಇಂತಹ ಸಜ್ಜನರಿಗೆ ಇಹಲೋಕದಲ್ಲೂ ಒಳಿತಿದೆ ಮತ್ತು ಪರಲೋಕ

ಗೃಹವಂತು ಅವರ ಮಟ್ಟಿಗೆ ಅತ್ಯುತ್ತಮವೇ ಆಗಿದೆ. 'ಧರ್ಮನಿಷ್ಠ'ರ ಭವನ ಬಹಳ ಚೆನ್ನಾಗಿದೆ.

وَلَنِعْمَ دَارُ الْمُتَّقِيْنَ ۝٣٠

31. ಶಾಶ್ವತ ನಿವಾಸದ ಸ್ವರ್ಗೋದ್ಯಾನಗಳು. ಅವುಗಳಲ್ಲಿ ಅವರು ಪ್ರವೇಶಿಸುವರು. ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವುವು. ಅಲ್ಲಿ ಎಲ್ಲವೂ ಅವರ ಇಚ್ಛೆಯ ಪ್ರಕಾರವಿರುವುದು. ಅಲ್ಲಾಹನು 'ಧರ್ಮನಿಷ್ಠ'ರಿಗೆ ಈ ಪ್ರತಿಫಲ ಕೊಡುತ್ತಾನೆ.

جَنّٰتُ عَدْنٍ يَّدْخُلُوْنَهَا تَجْرِيْ مِنْ
تَحْتِهَا الْاَنْهٰرُ لَهُمْ فِيْهَا مَا يَشَآءُوْنَ ۭ
كَذٰلِكَ يَجْزِي اللّٰهُ الْمُتَّقِيْنَ ۝٣١

32. ದೇವಚರರು ಆ 'ಧರ್ಮನಿಷ್ಠರು'ಗಳ ಪ್ರಾಣಗಳನ್ನು ಪಾವನಾವಸ್ಥೆಯಲ್ಲಿ ವಶಪಡಿಸಿ ಕೊಳ್ಳುವಾಗ, "ನಿಮ್ಮ ಮೇಲೆ ಶಾಂತಿ ಇರಲಿ. ನಿಮ್ಮ ಕರ್ಮಗಳ ಪ್ರತಿಫಲವಾಗಿ ಸ್ವರ್ಗದೊಳಗೆ ಪ್ರವೇಶಿಸಿರಿ" ಎನ್ನುವರು.

الَّذِيْنَ تَتَوَفّٰىهُمُ الْمَلٰۗىِٕكَةُ طَيِّبِيْنَ ۙ
يَقُوْلُوْنَ سَلٰمٌ عَلَيْكُمُ ۙ ادْخُلُوا الْجَنَّةَ
بِمَا كُنْتُمْ تَعْمَلُوْنَ ۝٣٢

33. ಓ ಪೈಗಂಬರರೇ, ಇನ್ನು ದೇವಚರರೇ ಬರಬೇಕು ಅಥವಾ ನಿಮ್ಮ ಪ್ರಭುವಿನ ತೀರ್ಮಾನವೇ ಬರಬೇಕೆಂದು ಇವರು ನಿರೀಕ್ಷಿಸುತ್ತಿರುವರೇ? ಇಂತಹ ಹಟಮಾರಿತನವನ್ನು ಇವರಿಗಿಂತ ಮುಂಚೆ ಅನೇಕರು ತೋರಿದ್ದಾರೆ. ಆಗ ಅವರ ಮೇಲೆ ಸಂಭವಿಸಿದುದು ಅವರ ಮೇಲೆ ಅಲ್ಲಾಹನ ಅಕ್ರಮವಾಗಿರಲಿಲ್ಲ. ವಾಸ್ತವದಲ್ಲಿ ಅವರು ತಾವೇ ತಮ್ಮ ಮೇಲೆ ಮಾಡಿಕೊಂಡಿದ್ದ ಅವರ ಸ್ವಂತ ಅಕ್ರಮವಾಗಿತ್ತು.

هَلْ يَنْظُرُوْنَ اِلَّآ اَنْ تَاْتِيَهُمُ الْمَلٰۗىِٕكَةُ
اَوْ يَاْتِيَ اَمْرُ رَبِّكَ ۭ كَذٰلِكَ فَعَلَ الَّذِيْنَ
مِنْ قَبْلِهِمْ ۭ وَمَا ظَلَمَهُمُ اللّٰهُ وَلٰكِنْ
كَانُوْٓا اَنْفُسَهُمْ يَظْلِمُوْنَ ۝٣٣

34. ಅವರ ದುಷ್ಕರ್ಮಗಳ ದುಷ್ಪರಿಣಾಮಗಳು ಕೊನೆಗೆ ಅವರನ್ನೇ ಪೀಡಿಸಿದುವು ಮತ್ತು ಅವರು ಯಾವುದನ್ನು ಅಪಹಾಸ್ಯ ಮಾಡುತ್ತಿದ್ದರೋ ಅದೇ ಅವರನ್ನು ಅಕ್ರಮಿಸಿಬಿಟ್ಟಿತು.

فَاَصَابَهُمْ سَيِّاٰتُ مَا عَمِلُوْا وَحَاقَ
بِهِمْ مَّا كَانُوْا بِهٖ يَسْتَهْزِءُوْنَ ۝٣٤

35. "ಅಲ್ಲಾಹನು ಇಚ್ಛಿಸುತ್ತಿದ್ದರೆ ನಾವಾಗಲಿ ನಮ್ಮ ಹಿರಿಯರಾಗಲಿ ಅವನ ಹೊರತು ಇತರರನ್ನು ಪೂಜಿಸುತ್ತಿರಲಿಲ್ಲ ಮತ್ತು ಅವನ ಅಪ್ಪಣೆಯ ವಿನಾ ಯಾವುದನ್ನೂ 'ನಿಷಿದ್ಧ' ಗೊಳಿಸುತ್ತಿರಲಿಲ್ಲ" ಎಂದು ಬಹುದೇವ ವಿಶ್ವಾಸಿಗಳು ಹೇಳುತ್ತಾರೆ. ಇಂತಹ ನೆಪಗಳನ್ನೇ ಇವರಿಗಿಂತ ಮುಂಚಿನವರೂ ಒಡ್ಡುತ್ತಿದ್ದರು. ವಿಷಯಗಳನ್ನು ಸುಸ್ಪಷ್ಟವಾಗಿ ತಲುಪಿಸುವ ಹೊರತು ಬೇರಾವ ಹೊಣೆಗಾರಿಕೆ ಯಾದರೂ ಸಂದೇಶವಾಹಕರ ಮೇಲೆ ಇದೆಯೇ?

وَقَالَ الَّذِيْنَ اَشْرَكُوْا لَوْ شَاۗءَ اللّٰهُ مَا
عَبَدْنَا مِنْ دُوْنِهٖ مِنْ شَيْءٍ نَّحْنُ
وَلَآ اٰبَاۗؤُنَا وَلَا حَرَّمْنَا مِنْ دُوْنِهٖ
مِنْ شَيْءٍ ۭ كَذٰلِكَ فَعَلَ الَّذِيْنَ مِنْ
قَبْلِهِمْ ۚ فَهَلْ عَلَى الرُّسُلِ اِلَّا الْبَلٰغُ
الْمُبِيْنُ ۝٣٥

36. ನಾವು ಪ್ರತಿಯೊಂದು ಸಮುದಾಯದಲ್ಲಿ ಓರ್ವ ಸಂದೇಶ ವಾಹಕನನ್ನು ಕಳುಹಿಸಿದೆವು ಮತ್ತು "ಅಲ್ಲಾಹನ ದಾಸ್ಯ-ಆರಾಧನೆ

وَلَقَدْ بَعَثْنَا فِيْ كُلِّ اُمَّةٍ رَّسُوْلًا اَنِ
اعْبُدُوا اللّٰهَ وَاجْتَنِبُوا الطَّاغُوْتَ ۚ فَمِنْهُمْ

ಮಾಡಿರಿ ಮತ್ತು 'ತಾಗೂತ್'ನ ಆರಾಧನೆಯಿಂದ ದೂರವಿರಿ" ಎಂದು ಅವರ ಮುಖಾಂತರ ಎಚ್ಚರಿಕೆ ನೀಡಿದೆವು. ಅನಂತರ ಅಲ್ಲಾಹನು ಕೆಲವರಿಗೆ ಸನ್ಮಾರ್ಗದರ್ಶನ ಮಾಡಿದನು ಮತ್ತು ಇನ್ನು ಕೆಲವರ ಮೇಲೆ ಪಥಭ್ರಷ್ಟತೆ ಹೇರಲ್ಪಟ್ಟಿತು. ಹೀಗೆ ಸುಳ್ಳಾಗಿಸುವವರ ಅಂತಿಮ ಪರಿಣಾಮವೇನಾಗಿದೆಯೆಂದು ಭೂಮಿಯ ಮೇಲೆ ಸಂಚರಿಸಿ ನೋಡಿಕೊಳ್ಳಿರಿ.

مَّنْ هَدَى اللَّهُ وَمِنْهُم مَّنْ حَقَّتْ عَلَيْهِ الضَّلَالَةُ ۚ فَسِيرُوا فِي الْأَرْضِ فَانظُرُوا كَيْفَ كَانَ عَاقِبَةُ الْمُكَذِّبِينَ ٣٦

37. ಓ ಪೈಗಂಬರರೇ, ನೀವು ಅವರ ಸನ್ಮಾರ್ಗದರ್ಶನಕ್ಕಾಗಿ ಎಷ್ಟು ಅತ್ಯಾಕಾಂಕ್ಷಿಯಾಗಿದ್ದರೂ ಅಲ್ಲಾಹನು ಯಾರನ್ನು ಪಥಭ್ರಷ್ಟಗೊಳಿಸುತ್ತಾನೋ ಅವನಿಗೆ ಸನ್ಮಾರ್ಗದರ್ಶನ ಮಾಡುವುದಿಲ್ಲ. ಇಂತಹವರಿಗೆ ಯಾರೂ ಸಹಾಯ ಮಾಡಲಾರರು.

إِن تَحْرِصْ عَلَىٰ هُدَاهُمْ فَإِنَّ اللَّهَ لَا يَهْدِي مَن يُضِلُّ ۖ وَمَا لَهُم مِّن نَّاصِرِينَ ٣٧

38. ಸತ್ತವನನ್ನು ಅಲ್ಲಾಹನು ಪುನರುತ್ಥಾನಗೊಳಿಸಲಾರನೆಂದು ಇವರು ದೃಢವಾಗಿ ಅಲ್ಲಾಹನಾಣೆ ಹಾಕಿ ಹೇಳುತ್ತಾರೆ. ಉತ್ಥಾನಗೊಳಿಸನೇಕೆ? ಇದೊಂದು ವಾಗ್ದಾನ. ಇದನ್ನು ಪೂರ್ಣಗೊಳಿಸುವುದನ್ನು ಅವನು ತನ್ನ ಮೇಲೆ ನಿರ್ಬಂಧಗೊಳಿಸಿಕೊಂಡಿರುತ್ತಾನೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ.

وَأَقْسَمُوا بِاللَّهِ جَهْدَ أَيْمَانِهِمْ ۙ لَا يَبْعَثُ اللَّهُ مَن يَمُوتُ ۚ بَلَىٰ وَعْدًا عَلَيْهِ حَقًّا وَلَٰكِنَّ أَكْثَرَ النَّاسِ لَا يَعْلَمُونَ ٣٨

39. ಯಾವ ಪರಮಾರ್ಥದ ಬಗ್ಗೆ ಇವರು ಭಿನ್ನಾಭಿಪ್ರಾಯವುಳ್ಳವರಾಗಿರುವರೋ ಅದನ್ನು ಅಲ್ಲಾಹನು ಇವರ ಮುಂದೆ ಪ್ರಕಟಗೊಳಿಸಲಿಕ್ಕಾಗಿ ಮತ್ತು ಸತ್ಯನಿಷೇಧಿಗಳಿಗೆ ತಾವು ಸುಳ್ಳುಗಾರರೆಂದು ಅರಿಯುವಂತಾಗಲಿಕ್ಕಾಗಿ ಹೀಗಾಗಬೇಕಾದುದು ಅಗತ್ಯ.

لِيُبَيِّنَ لَهُمُ الَّذِي يَخْتَلِفُونَ فِيهِ وَلِيَعْلَمَ الَّذِينَ كَفَرُوا أَنَّهُمْ كَانُوا كَاذِبِينَ ٣٩

40. (ಇನ್ನು ಅದರ ಸಾಧ್ಯತೆಯ ಕುರಿತು) ನಾವು ಯಾವುದನ್ನಾದರೂ ಅಸ್ತಿತ್ವಕ್ಕೆ ತರಬೇಕೆಂದಾದರೆ ಹೆಚ್ಚೇನೂ ಮಾಡಬೇಕಾಗಿ ಬರುವುದಿಲ್ಲ, 'ಆಗು' ಎಂದು ಅಪ್ಪಣೆ ಕೊಟ್ಟರಾಯಿತು. ಅದು ಆಗಿ ಬಿಡುತ್ತದೆ.

إِنَّمَا قَوْلُنَا لِشَيْءٍ إِذَا أَرَدْنَاهُ أَن نَّقُولَ لَهُ كُن فَيَكُونُ ٤٠

41. ಮರ್ದನ ಸಹಿಸಿದ ತರುವಾಯ ಅಲ್ಲಾಹನಿಗಾಗಿ ಹಿಜ್ರತ್(ವಲಸೆ) ಮಾಡಿದವರಿಗೆ ನಾವು ಇಹದಲ್ಲೇ ಉತ್ತಮ ವಾಸಸ್ಥಾನ ನೀಡುವೆವು ಮತ್ತು ಪರಲೋಕದ ಪ್ರತಿಫಲವಂತು ಅತ್ಯಂತ ಹಿರಿದಾಗಿದೆ.[8] ಅದೆಷ್ಟು ಶ್ರೇಷ್ಠವಾದ ಪ್ರತಿಫಲವು ಅವರನ್ನು ಕಾದಿದೆ ಎಂಬುದನ್ನು ಅವರು ಅರಿತು ಕೊಂಡಿದ್ದರೆ!

وَالَّذِينَ هَاجَرُوا فِي اللَّهِ مِن بَعْدِ مَا ظُلِمُوا لَنُبَوِّئَنَّهُمْ فِي الدُّنْيَا حَسَنَةً ۖ وَلَأَجْرُ الْآخِرَةِ أَكْبَرُ ۚ لَوْ كَانُوا يَعْلَمُونَ ٤١

8. ಇದು ಸತ್ಯನಿಷೇಧಿಗಳ ಸಹಿಸಲಸಾಧ್ಯವಾದ ಅಕ್ರಮಗಳಿಂದ ಬೇಸತ್ತು ಇಥಿಯೋಪಿಯಾದ ಕಡೆಗೆ ವಲಸೆ ಹೋದ ವಲಸಿಗರ ಕಡೆಗಿರುವ ಸೂಚನೆ.

42. ತಾಳ್ಮೆ ವಹಿಸಿದ ಹಾಗೂ ತಮ್ಮ ಪ್ರಭುವಿನ ಭರವಸೆಯಲ್ಲಿ ಕಾರ್ಯವೆಸಗುತ್ತಿರುವ ಆ ಮರ್ದಿತರು.

الَّذِينَ صَبَرُوا وَعَلَىٰ رَبِّهِمْ يَتَوَكَّلُونَ ﴿٤٢﴾

43. ಓ ಪೈಗಂಬರರೇ, ನಾವು ನಿಮಗಿಂತ ಮುಂಚೆಯೂ ಸಂದೇಶ ವಾಹಕರನ್ನು ಕಳುಹಿಸಿದಾಗಲೆಲ್ಲ ಪುರುಷರನ್ನೇ ಕಳುಹಿಸಿದ್ದೇವೆ. ನಾವು ಅವರಿಗೆ ನಮ್ಮ ಸಂದೇಶಗಳನ್ನು 'ದಿವ್ಯವಾಣಿ' ಮಾಡುತ್ತಿದ್ದೆವು. ನಿಮಗೆ ಗೊತ್ತಿಲ್ಲದಿದ್ದರೆ ವಿದ್ವಾಂಸರೊಡನೆ ವಿಚಾರಿಸಿರಿ.[9]

وَمَا أَرْسَلْنَا مِن قَبْلِكَ إِلَّا رِجَالًا نُّوحِي
إِلَيْهِمْ فَاسْأَلُوا أَهْلَ الذِّكْرِ إِن
كُنتُمْ لَا تَعْلَمُونَ ﴿٤٣﴾

44. ಗತ ಸಂದೇಶವಾಹಕರಿಗೂ ನಾವು ಪ್ರತ್ಯಕ್ಷ ಪ್ರಮಾಣಗಳನ್ನೂ ಗ್ರಂಥಗಳನ್ನೂ ಕೊಟ್ಟು ಕಳುಹಿಸಿದ್ದೆವು ಮತ್ತು ಈಗ ಈ ಸ್ಮರಣವನ್ನು ನಿಮಗೆ ಅವತೀರ್ಣಗೊಳಿಸಿ, ನೀವು ಜನತೆಯ ಮುಂದೆ, ಅವರಿಗಾಗಿ ಅವತೀರ್ಣಗೊಳಿಸಲ್ಪಟ್ಟಿರುವ[10] ಬೋಧನೆಯನ್ನು ವಿವರಿಸುವಂತೆಯೂ ಸ್ಪಷ್ಟೀಕರಿಸುವಂತೆಯೂ ಜನರು (ಸ್ವಯಂ) ವಿವೇಚಿಸುವಂತೆಯೂ ಮಾಡಿದೆವು.

بِالْبَيِّنَاتِ وَالزُّبُرِ ۗ وَأَنزَلْنَا إِلَيْكَ الذِّكْرَ
لِتُبَيِّنَ لِلنَّاسِ مَا نُزِّلَ إِلَيْهِمْ وَلَعَلَّهُمْ
يَتَفَكَّرُونَ ﴿٤٤﴾

45. (ಸಂದೇಶವಾಹಕರ ಕರೆಯನ್ನು ವಿರೋಧಿಸುವ ಕಾರ್ಯದಲ್ಲಿ) ಅತ್ಯಂತ ಹೀನರೀತಿಯ ಕುತಂತ್ರ ಹೂಡುವವರು, ಅಲ್ಲಾಹನು ಅವರನ್ನು ನೆಲವು ನುಂಗುವಂತೆ ಮಾಡಿ ಬಿಡುವನು ಅಥವಾ ಅವರು ನಿರೀಕ್ಷಿಸದಂತಹ ಕಡೆಯಿಂದ ಯಾತನೆಯನ್ನು ತಂದೆರಗಿಸುವನು-

أَفَأَمِنَ الَّذِينَ مَكَرُوا السَّيِّئَاتِ أَن
يَخْسِفَ اللَّهُ بِهِمُ الْأَرْضَ أَوْ يَأْتِيَهُمُ
الْعَذَابُ مِنْ حَيْثُ لَا يَشْعُرُونَ ﴿٤٥﴾

46. ಅಥವಾ ಅವರು ನಡೆದಾಡುವಾಗ ಹಠಾತ್ತನೆ ಹಿಡಿಯುವನು-

أَوْ يَأْخُذَهُمْ فِي تَقَلُّبِهِمْ فَمَا هُم
بِمُعْجِزِينَ ﴿٤٦﴾

47. ಅಥವಾ ಅವರಿಗೆ ಬರಲಿರುವ ವಿಪತ್ತಿನ ಭೀತಿ ತಗಲಿದ್ದು ಅದರಿಂದ ತಪ್ಪಿಸಿಕೊಳ್ಳುವ ಚಿಂತೆಯಿಂದ ಜಾಗ್ರತರಾಗಿರುವ ಸ್ಥಿತಿಯಲ್ಲಿ ಅವರನ್ನು ಹಿಡಿಯುವನು ಎಂಬ ಬಗ್ಗೆ ನಿರ್ಭೀತರಾಗಿರುವರೇ? ಅವನು ಏನು ತಾನೆ ಮಾಡಲಿಚ್ಛಿಸಿದರೂ ಇವರು ಅವನನ್ನು ಸೋಲಿಸುವ ಶಕ್ತಿಯನ್ನು ಹೊಂದಿರುವುದಿಲ್ಲ. ವಾಸ್ತವದಲ್ಲಿ ನಿಮ್ಮ ಪ್ರಭು ಮಹಾ ವತ್ಸಲನೂ ಕರುಣಾನಿಧಿಯೂ ಆಗಿರುತ್ತಾನೆ.

أَوْ يَأْخُذَهُمْ عَلَىٰ تَخَوُّفٍ فَإِنَّ رَبَّكُمْ
لَرَءُوفٌ رَّحِيمٌ ﴿٤٧﴾

9. ಅರ್ಥಾತ್- ಪ್ರವಾದಿಗಳು ಮಾನವರೇ ಆಗಿದ್ದರೋ ಅಥವಾ ಬೇರೇನಾದರೂ ಆಗಿದ್ದರೋ ಎಂಬ ಕುರಿತು ದಿವ್ಯಗ್ರಂಥಗಳ ಜ್ಞಾನ ಇರುವವರೊಡನೆ ಕೇಳಿರಿ.

10. ಅರ್ಥಾತ್- ಪ್ರವಾದಿವರ್ಯರು(ಸ) ತಮ್ಮ ಮಾತು ಕೃತಿಗಳ ಮೂಲಕ ಗ್ರಂಥದ ಬೋಧನೆ ಮತ್ತು ಆದೇಶಗಳ ವ್ಯಾಖ್ಯಾನ ಮತ್ತು ವಿಶದೀಕರಣ ಮಾಡಲಿಕ್ಕಾಗಿ ಅವರ ಮೇಲೆ ಗ್ರಂಥವನ್ನು ಅವತೀರ್ಣಗೊಳಿಸಲಾಗಿದೆ. ಇದರಿಂದ ಪ್ರವಾದಿಚರ್ಯೆಯೇ ಕುರ್‌ಆನಿನ ಅಧಿಕೃತ ಮತ್ತು ನಂಬಲರ್ಹ ವ್ಯಾಖ್ಯಾನವಾಗಿದೆಯೆಂದೂ ಸಾಬೀತಾಗುತ್ತದೆ.

48. ಅಲ್ಲಾಹನು ಸೃಷ್ಟಿಸಿರುವ ವಸ್ತುಗಳ ನೆರಳು ಎಡಕ್ಕೂ ಬಲಕ್ಕೂ ಬೀಳುತ್ತ ಅಲ್ಲಾಹನಿಗೆ ಎರಗುತ್ತಿರುವುದನ್ನು ಇವರು ನೋಡುವುದಿಲ್ಲವೇ?[11] ಹೀಗೆ ಎಲ್ಲವೂ ತಮ್ಮ ದೀನಭಾವವನ್ನು ಪ್ರಕಟಿಸುತ್ತವೆ.

أَوَلَمْ يَرَوْا إِلَىٰ مَا خَلَقَ ٱللَّهُ مِن شَىْءٍ يَتَفَيَّؤُا۟ ظِلَـٰلُهُۥ عَنِ ٱلْيَمِينِ وَٱلشَّمَآئِلِ سُجَّدًا لِّلَّهِ وَهُمْ دَٰخِرُونَ ﴿٤٨﴾

49. ಆಕಾಶಗಳಲ್ಲಿಯೂ ಭೂಮಿಯಲ್ಲಿಯೂ ಎಷ್ಟು ಸಜೀವಿ ಸೃಷ್ಟಿಗಳಿವೆಯೋ ಎಷ್ಟು ದೇವಚರರಿರುವರೋ ಸಕಲವೂ ಅಲ್ಲಾಹನ ಮುಂದೆ ಸಾಷ್ಟಾಂಗವೆರಗುತ್ತವೆ. ಅವು ಎಷ್ಟಕ್ಕೂ ಅಹಂಭಾವ ತೋರುವುದಿಲ್ಲ.

وَلِلَّهِ يَسْجُدُ مَا فِى ٱلسَّمَـٰوَٰتِ وَمَا فِى ٱلْأَرْضِ مِن دَآبَّةٍ وَٱلْمَلَـٰٓئِكَةُ وَهُمْ لَا يَسْتَكْبِرُونَ ﴿٤٩﴾

50. ತಮ್ಮ ಮೇಲಿರುವ ತಮ್ಮ ಪ್ರಭುವನ್ನು ಅವರು ಭಯಪಡುತ್ತಾರೆ ಮತ್ತು ಕೊಟ್ಟ ಅಪ್ಪಣೆ ಪ್ರಕಾರವೇ ಕಾರ್ಯವೆಸಗುತ್ತಾರೆ.

يَخَافُونَ رَبَّهُم مِّن فَوْقِهِمْ وَيَفْعَلُونَ مَا يُؤْمَرُونَ ۩ ﴿٥٠﴾ السجدة

ಸಜ್ದಾ السجدة

51. ಇಬ್ಬರು ಆರಾಧ್ಯರನ್ನು ಮಾಡಿಕೊಳ್ಳಬೇಡಿರಿ[12] ಆರಾಧ್ಯನಂತು ಒಬ್ಬನೇ. ಆದುದರಿಂದ ನನ್ನನ್ನು ಮಾತ್ರ ಭಯಪಡಿರಿ ಎಂದು ಅಲ್ಲಾಹನು ಆಜ್ಞಾಪಿಸುತ್ತಾನೆ.

وَقَالَ ٱللَّهُ لَا تَتَّخِذُوٓا۟ إِلَـٰهَيْنِ ٱثْنَيْنِ ۖ إِنَّمَا هُوَ إِلَـٰهٌ وَٰحِدٌ ۖ فَإِيَّـٰىَ فَٱرْهَبُونِ ﴿٥١﴾

52. ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಸಕಲವೂ ಅವನದೇ. ಅವನ ಧರ್ಮವೇ (ಇಡೀ ವಿಶ್ವದಲ್ಲಿ) ಸಂಪೂರ್ಣವಾಗಿ ಜಾರಿಯಲ್ಲಿದೆ.[13] ಹೀಗಿರುತ್ತ ನೀವು ಅಲ್ಲಾಹನನ್ನು ಬಿಟ್ಟು ಇನ್ನಾರನ್ನಾದರೂ ಭಯಪಡುವಿರಾ?

وَلَهُۥ مَا فِى ٱلسَّمَـٰوَٰتِ وَٱلْأَرْضِ وَلَهُ ٱلدِّينُ وَاصِبًا ۚ أَفَغَيْرَ ٱللَّهِ تَتَّقُونَ ﴿٥٢﴾

53. ನಿಮಗೆ ಒದಗಿರುವ ಎಲ್ಲ 'ಭವ್ಯ ಕೊಡುಗೆ'ಗಳು ಅಲ್ಲಾಹನ ಕಡೆಯಿಂದಲೇ ಆಗಿರುತ್ತವೆ. ನಿಮಗೆ ಹಾನಿ ತಟ್ಟಿದಾಗ ನೀವು ಅವನೊಡನೆಯೇ ಮೊರೆಯಿಡುತ್ತೀರಿ.

وَمَا بِكُم مِّن نِّعْمَةٍ فَمِنَ ٱللَّهِ ۖ ثُمَّ إِذَا مَسَّكُمُ ٱلضُّرُّ فَإِلَيْهِ تَجْـَٔرُونَ ﴿٥٣﴾

54. ಆದರೆ ಅಲ್ಲಾಹನು ಆ ಸಂಕಷ್ಟವನ್ನು ನೀಗಿಸಿದಾಗ ತಟ್ಟನೆ ನಿಮ್ಮಲ್ಲೊಂದು ವಿಭಾಗ ತನ್ನ ಪ್ರಭುವಿನೊಂದಿಗೆ ಇತರರನ್ನು (ಆ ಅನುಗ್ರಹದ ಕೃತಜ್ಞತೆಗಾಗಿ) ಸಹಭಾಗಿಗಳನ್ನಾಗಿ ಮಾಡ ತೊಡಗುತ್ತದೆ,

ثُمَّ إِذَا كَشَفَ ٱلضُّرَّ عَنكُمْ إِذَا فَرِيقٌ مِّنكُم بِرَبِّهِمْ يُشْرِكُونَ ﴿٥٤﴾

11. ಅರ್ಥಾತ್- ಕಾಯವನ್ನು ಹೊಂದಿರುವ ಪ್ರತಿಯೊಂದು ವಸ್ತುವಿನ ನೆರಳು-ಪರ್ವತಗಳು, ವೃಕ್ಷಗಳು, ಪ್ರಾಣಿಗಳು ಮತ್ತು ಮನುಷ್ಯರೆಲ್ಲರೂ ಒಂದು ಸರ್ವವ್ಯಾಪಕವಾದ ನಿಯಮಕ್ಕೆ ಅಧೀನವಾಗಿವೆ ಎಂಬುದನ್ನು ಸೂಚಿಸುತ್ತದೆ. ಎಲ್ಲದರ ಹಣೆಯಲ್ಲೂ ದಾಸ್ಯದ ಚುಕ್ಕೆಯಿದೆ. ದೇವತ್ವದಲ್ಲಿ ಯಾರಿಗೂ ಕಿಂಚಿತ್ತೂ ಪಾಲಿಲ್ಲ. ನೆರಳು ಬೀಳುವುದು ಅದು ಭೌತಿಕ ವಸ್ತುವಾಗಿದೆ ಎಂಬುದರ ಸೂಚನೆಯಾಗಿದೆ. ಭೌತಿಕ ವಸ್ತುವಾಗಿರುವುದು ದಾಸ್ಯಕ್ಕೊಳಪಟ್ಟಿರುವುದರ ಮತ್ತು ಸೃಷ್ಟಿಯಾಗಿರುವುದರ ಸ್ಪಷ್ಟ ಆಧಾರವಾಗಿದೆ.

12. ಎರಡು ದೇವರುಗಳ ಅಸ್ತಿತ್ವದ ನಿರಾಕರಣೆಯಲ್ಲಿ ಸಹಜವಾಗಿಯೇ ಎರಡಕ್ಕಿಂತ ಅಧಿಕ ದೇವರುಗಳ ನಿರಾಕರಣೆಯೂ ಇದೆ.

13. ಬೇರೆ ಮಾತುಗಳಲ್ಲಿ ಹೇಳುವುದಾದರೆ ಸಮಸ್ತ ನಿಸರ್ಗ ವ್ಯವಸ್ಥೆ ಅವನ ಅನುಸರಣೆಯ ಆಧಾರದಲ್ಲೇ ನಡೆಯುತ್ತಿದೆ.

55. ಇದು ಅಲ್ಲಾಹನ ಉಪಕಾರಕ್ಕೆ ಕೃತಘ್ನತೆ ತೋರಲಿಕ್ಕಾಗಿ. ಸರಿ; ಹಾಗಾದರೆ ಸುಖೋಪ ಭೋಗಗಳನ್ನು ಅನುಭವಿಸಿಕೊಳ್ಳಿರಿ. ಸದ್ಯವೇ ನಿಮಗೆ ತಿಳಿಯುವುದು.

لِيَكْفُرُوا بِمَا آتَيْنَاهُمْ ۚ فَتَمَتَّعُوا ۖ فَسَوْفَ تَعْلَمُونَ ﴿٥٥﴾

56. ಇವರು ಯಾರ ನಿಜಸ್ಥಿತಿಯನ್ನು ಅರಿತಿಲ್ಲವೋ ಅಂತಹವರ ಪಾಲನ್ನು ನಾವು ಕೊಟ್ಟಿರುವ ಜೀವನಾಧಾರದಿಂದ ನಿಶ್ಚಯಿಸುತ್ತಾರೆ. ಅಲ್ಲಾಹನಾಣೆ, ಈ ಸುಳ್ಳನ್ನು ನೀವು ಹೇಗೆ ಸೃಷ್ಟಿಸಿ ಕೊಂಡಿದ್ದಿರೆಂದು ನಿಮ್ಮೊಡನೆ ಖಂಡಿತವಾಗಿಯೂ ಕೇಳಲಾಗುವುದು.

وَيَجْعَلُونَ لِمَا لَا يَعْلَمُونَ نَصِيبًا مِمَّا رَزَقْنَاهُمْ ۗ تَاللَّهِ لَتُسْأَلُنَّ عَمَّا كُنْتُمْ تَفْتَرُونَ ﴿٥٦﴾

57. ಇವರು ಅಲ್ಲಾಹನಿಗೆ ಪುತ್ರಿಯರನ್ನು ನಿಶ್ಚಯಿಸುತ್ತಾರೆ.[14] ಅವನು ಪರಮ ಪಾವನನು ಮತ್ತು ಇವರು ತಮಗಾಗಿ ತಾವಿಷ್ಟಪಟ್ಟುದನ್ನೇ ನಿಶ್ಚಯಿಸಿಕೊಳ್ಳುತ್ತಾರಲ್ಲಾ![15]

وَيَجْعَلُونَ لِلَّهِ الْبَنَاتِ سُبْحَانَهُ ۙ وَلَهُمْ مَا يَشْتَهُونَ ﴿٥٧﴾

58. ಇವರ ಪೈಕಿ ಯಾರಿಗಾದರೂ ಮಗಳು ಹುಟ್ಟಿದ ಸುವಾರ್ತೆ ಕೊಟ್ಟಾಗ ಅವನ ಮುಖ ಕಳೆಗುಂದಿ ಹೋಗುತ್ತದೆ ಮತ್ತು ಅವನು ಸಿಡಿಮಿಡಿಗೊಳ್ಳುತ್ತಾನೆ.

وَإِذَا بُشِّرَ أَحَدُهُمْ بِالْأُنْثَىٰ ظَلَّ وَجْهُهُ مُسْوَدًّا وَهُوَ كَظِيمٌ ﴿٥٨﴾

59. ಈ ಅಶುಭ ವಾರ್ತೆಯ ಬಳಿಕ ಯಾರಿಗೂ ಮುಖ ತೋರಿಸಲಾಗದೆ ಜನರಿಂದ ತಲೆ ಮರೆಸಿಕೊಳ್ಳುತ್ತಾನೆ. ಈ ಅಪಮಾನದೊಂದಿಗೆ ಮಗುವನ್ನಿರಿಸಿಕೊಳ್ಳಲೇ ಅಥವಾ ಮಣ್ಣಿನಲ್ಲಿ ಹುಗಿದು ಬಿಡಲೇ ಎಂದು ಯೋಚಿಸುತ್ತಾನೆ. ಇವರು ಅಲ್ಲಾಹನ ಬಗ್ಗೆ ಎಂತಹ ಕೆಟ್ಟ ನಿರ್ಣಯ ಕೈಗೊಳ್ಳುತ್ತಾರೆಂದು ನೋಡಿರಿ.[16]

يَتَوَارَىٰ مِنَ الْقَوْمِ مِنْ سُوءِ مَا بُشِّرَ بِهِ ۚ أَيُمْسِكُهُ عَلَىٰ هُونٍ أَمْ يَدُسُّهُ فِي التُّرَابِ ۗ أَلَا سَاءَ مَا يَحْكُمُونَ ﴿٥٩﴾

60. ಪರಲೋಕದ ಮೇಲೆ ವಿಶ್ವಾಸವಿರಿಸದವರೇ ದುರ್ಗುಣ ವಿಶೇಷಣಗಳಿಗೆ ಅರ್ಹರು. ಅಲ್ಲಾಹನಿಗೆ ಅತ್ಯುತ್ತಮ ಗುಣ ವಿಶೇಷಗಳಿವೆ. ಅವನೇ ಮಹಾ ಪ್ರತಾಪಿಯೂ ಮಹಾ ಧೀಮಂತನೂ ಆಗಿರುತ್ತಾನೆ.

لِلَّذِينَ لَا يُؤْمِنُونَ بِالْآخِرَةِ مَثَلُ السَّوْءِ ۖ وَلِلَّهِ الْمَثَلُ الْأَعْلَىٰ ۚ وَهُوَ الْعَزِيزُ الْحَكِيمُ ﴿٦٠﴾

14. ಅರೇಬಿಯಾದ ಬಹುದೇವಾರಾಧಕರು ನೆಚ್ಚಿಕೊಂಡಿದ್ದ ಆರಾಧ್ಯರುಗಳಲ್ಲಿ ದೇವಂದಿರು ಕಡಿಮೆ ಸಂಖ್ಯೆಯಲ್ಲಿದ್ದರು. ದೇವಿಗಳ ಸಂಖ್ಯೆ ಹೆಚ್ಚಿತ್ತು. ದೇವಿಯರು ದೇವಪುತ್ರಿಯರಾಗಿದ್ದಾರೆ ಎಂದು ಅವರು ವಿಶ್ವಾಸವಿಡುತ್ತಿದ್ದರು. ಹಾಗೆಯೇ ದೇವಚರರನ್ನೂ ಅವರು ದೇವಪುತ್ರಿಯರೆಂದು ಕರೆಯುತ್ತಿದ್ದರು.

15. ಅರ್ಥಾತ್- ಪುತ್ರರನ್ನು.

16. ಅರ್ಥಾತ್- ತಮ್ಮ ಪಾಲಿಗೆ ಅಪಮಾನಕರವೆಂದು ಅವರು ಭಾವಿಸುವ ಪುತ್ರಿಯರನ್ನು ನಿಸ್ಸಂಕೋಚವಾಗಿ ಅಲ್ಲಾಹನಿಗೆ ವಹಿಸಿಬಿಡುತ್ತಿದ್ದರು.

61. ಅಲ್ಲಾಹನು ಜನರನ್ನು ಅವರ ಅತ್ಯಾಚಾರಗಳಿಗಾಗಿ ತಕ್ಷಣ ಹಿಡಿಯುತ್ತಿದ್ದರೆ ಭೂಮಿಯ ಮೇಲೆ ಒಂದು ಜೀವಿಯನ್ನೂ ಬಿಡುತ್ತಿರಲಿಲ್ಲ. ಆದರೆ ಅವನು ಎಲ್ಲರಿಗೂ ಒಂದು ನಿಶ್ಚಿತ ಸಮಯದ ವರೆಗೆ ಕಾಲಾವಕಾಶ ನೀಡುತ್ತಾನೆ. ಮುಂದೆ ಆ ಸಮಯ ಬಂದು ಬಿಟ್ಟೊಡನೆ ಅದರಿಂದ ಒಂದು ಕ್ಷಣವೂ ಹಿಂದೆ ಮುಂದೆ ಆಗುವಂತಿಲ್ಲ.

وَلَوْ يُؤَاخِذُ اللّٰهُ النَّاسَ بِظُلْمِهِمْ مَّا تَرَكَ
عَلَيْهَا مِنْ دَآبَّةٍ وَّلٰكِنْ يُّؤَخِّرُهُمْ اِلٰٓى
اَجَلٍ مُّسَمًّى ۚ فَاِذَا جَآءَ اَجَلُهُمْ لَا
يَسْتَاْخِرُوْنَ سَاعَةً وَّلَا يَسْتَقْدِمُوْنَ ﴿٦١﴾

62. ಇಂದು ಇವರು ತಮ್ಮ ಸ್ವಂತಕ್ಕಾಗಿ ಮೆಚ್ಚದಂತಹವುಗಳನ್ನು ಅಲ್ಲಾಹನಿಗೆ ನಿಶ್ಚಯಿಸುತ್ತಾರೆ. ಅವರಿಗಾಗಿ ಒಳಿತೇ ಇರುವುದೆಂದು ಅವರ ನಾಲಗೆಗಳು ಸುಳ್ಳಾಡುತ್ತಿವೆ. ಅವರಿಗಿರುವುದು ಒಂದೇ ವಸ್ತು. ಅದು ನರಕಾಗ್ನಿ. ನಿಶ್ಚಯವಾಗಿಯೂ ಇವರು ಎಲ್ಲರಿ ಗಿಂತಲೂ ಮುಂದಾಗಿ ಅದಕ್ಕೆ ಕಳುಹಿಸಲ್ಪಡುವರು.

وَيَجْعَلُوْنَ لِلّٰهِ مَا يَكْرَهُوْنَ وَتَصِفُ
اَلْسِنَتُهُمُ الْكَذِبَ اَنَّ لَهُمُ الْحُسْنٰى ؕ
لَا جَرَمَ اَنَّ لَهُمُ النَّارَ وَاَنَّهُمْ مُّفْرَطُوْنَ ﴿٦٢﴾

63. ಓ ಪೈಗಂಬರರೇ, ಅಲ್ಲಾಹನಾಣೆ! ನಾವು ನಿಮಗಿಂತ ಮುಂಚೆಯೂ ಅನೇಕ ಜನಾಂಗಗಳಿಗೆ ಸಂದೇಶವಾಹಕರನ್ನು ಕಳುಹಿಸಿದ್ದೇವೆ. (ಮುಂಚೆಯೂ) ಶೈತಾನನು ಅವರ ದುಷ್ಕರ್ಮಗಳನ್ನು ಅವರಿಗೆ ಮನೋಹರವನ್ನಾಗಿ ಮಾಡಿ ತೋರಿಸಿದನು (ಮತ್ತು ಅವರು ಸಂದೇಶವಾಹಕರ ಮಾತನ್ನು ಕೇಳಲಿಲ್ಲ.) ಆ ಶೈತಾನನೇ ಇಂದು ಇವರ ಸಂರಕ್ಷಕನೂ ಆಗಿದ್ದಾನೆ ಮತ್ತು ಇವರು ವೇದನಾಯುಕ್ತ ಶಿಕ್ಷೆಗೆ ಅರ್ಹರಾಗುತ್ತಿದ್ದಾರೆ.

تَاللّٰهِ لَقَدْ اَرْسَلْنَآ اِلٰٓى اُمَمٍ مِّنْ قَبْلِكَ
فَزَيَّنَ لَهُمُ الشَّيْطٰنُ اَعْمَالَهُمْ فَهُوَ
وَلِيُّهُمُ الْيَوْمَ وَلَهُمْ عَذَابٌ اَلِيْمٌ ﴿٦٣﴾

64. ನೀವು ಅವರು ಇರಿಸಿಕೊಂಡಿರುವ ಆ ಭಿನ್ನಾಭಿಪ್ರಾಯಗಳ ವಸ್ತುಸ್ಥಿತಿಯನ್ನು ಅವರಿಗೆ ವಿವರಿಸಲಿಕ್ಕಾಗಿ ನಾವು ಈ ಗ್ರಂಥವನ್ನು ನಿಮಗೆ ಅವತೀರ್ಣಗೊಳಿಸಿರುತ್ತೇವೆ. ಈ ಗ್ರಂಥವು ಇದನ್ನು ನಂಬುವವರಿಗೆ ಮಾರ್ಗದರ್ಶಕ ಹಾಗೂ ಅನುಗ್ರಹವಾಗಿ ಅವತೀರ್ಣಗೊಂಡಿರುತ್ತದೆ.

وَمَآ اَنْزَلْنَا عَلَيْكَ الْكِتٰبَ اِلَّا لِتُبَيِّنَ
لَهُمُ الَّذِى اخْتَلَفُوْا فِيْهِ ۙ وَهُدًى
وَّرَحْمَةً لِّقَوْمٍ يُّؤْمِنُوْنَ ﴿٦٤﴾

65. ಅಲ್ಲಾಹನು ಆಕಾಶದಿಂದ ನೀರನ್ನು ಸುರಿಸಿದನು ಮತ್ತು ನಿರ್ಜೀವವಾಗಿ ಬಿದ್ದುಕೊಂಡಿದ್ದ ನೆಲದಲ್ಲಿ ಅದರಿಂದಾಗಿ ಜೀವಕಳೆಯನ್ನುಂಟು ಮಾಡಿದನು.[17] (ಇದನ್ನು ನೀವು ಪ್ರತಿಯೊಂದು ಮಳೆಗಾಲದಲ್ಲಿ ನೋಡುತ್ತೀರಿ) ನಿಶ್ಚಯವಾಗಿಯೂ ಆಲಿಸುವವರಿಗೆ ಇದರಲ್ಲಿ ಒಂದು ನಿದರ್ಶನವಿದೆ.

وَاللّٰهُ اَنْزَلَ مِنَ السَّمَآءِ مَآءً فَاَحْيَا
بِهِ الْاَرْضَ بَعْدَ مَوْتِهَا ؕ اِنَّ فِىْ ذٰلِكَ
لَاٰيَةً لِّقَوْمٍ يَّسْمَعُوْنَ ﴿٦٥﴾ ع

17. ಅರ್ಥಾತ್- ಪ್ರತಿವರ್ಷವೂ ನೀವು ಈ ದೃಶ್ಯವನ್ನು ನೋಡುತ್ತೀರಿ. ಭೂಮಿ ಸಂಪೂರ್ಣವಾಗಿ ಬಟ್ಟ ಬಯಲಾಗಿರುತ್ತದೆ. ಯಾವ ಜೀವಕಳೆಯೂ ಅದರಲ್ಲಿ ಕಂಡು ಬರುವುದಿಲ್ಲ. ಹುಲ್ಲುಕಡ್ಡಿಗಳಾಗಲಿ, ಬಳ್ಳಿಗಳಾಗಲಿ, ಫಲಪುಷ್ಪಗಳಾಗಲಿ, ಭೂಚರ ಮಳೆ ಹುಳಗಳಾಗಲಿ

66. ನಿಶ್ಚಯವಾಗಿಯೂ ಜಾನುವಾರುಗಳಲ್ಲಿಯೂ ನಿಮಗೊಂದು ಪಾಠವಿದ್ದೇ ಇದೆ. ಅವುಗಳ ಹೊಟ್ಟೆಯೊಳಗಿರುವ ಸೆಗಣಿ ಮತ್ತು ರಕ್ತದ ಮಧ್ಯದಿಂದ ಕುಡಿಯುವವರಿಗೆ ಆಹ್ಲಾದಕರವಾದ ಶುದ್ಧ ಹಾಲನ್ನು ನಾವು ಕುಡಿಸುತ್ತೇವೆ.

وَاِنَّ لَكُمۡ فِى الۡاَنۡعَامِ لَعِبۡرَةً ؕ نُسۡقِيۡكُمۡ
مِّمَّا فِىۡ بُطُوۡنِهٖ مِنۡۢ بَيۡنِ فَرۡثٍ وَّدَمٍ
لَّبَنًا خَالِصًا سَآئِغًا لِّلشّٰرِبِيۡنَ ﴿۶۶﴾

67. (ಇದೇ ತರದಲ್ಲಿ) ಖರ್ಜೂರದ ಮರಗಳಿಂದಲೂ ದ್ರಾಕ್ಷೆಯ ಬಳ್ಳಿಗಳಿಂದಲೂ ನಾವು ಒಂದು ವಸ್ತುವನ್ನು ನಿಮಗೆ ಕುಡಿಸುತ್ತೇವೆ. ಅದನ್ನು ನೀವು ಮಾದಕ ಪೇಯವನ್ನಾಗಿಯೂ ಶುದ್ಧ ಆಹಾರ ವನ್ನಾಗಿಯೂ ಮಾಡಿಕೊಳ್ಳುತ್ತೀರಿ.[18] ನಿಶ್ಚಯವಾಗಿಯೂ ಬುದ್ಧಿ ಜೀವಿಗಳಿಗೆ ಇದರಲ್ಲಿ ಒಂದು ನಿದರ್ಶನವಿದೆ.

وَمِنۡ ثَمَرٰتِ النَّخِيۡلِ وَالۡاَعۡنَابِ
تَتَّخِذُوۡنَ مِنۡهُ سَكَرًا وَّرِزۡقًا حَسَنًا ؕ
اِنَّ فِىۡ ذٰلِكَ لَاٰيَةً لِّقَوۡمٍ يَّعۡقِلُوۡنَ ﴿۶۷﴾

68-69. ಇನ್ನೂ ನೋಡಿರಿ. ನಿಮ್ಮ ಪ್ರಭು ಜೇನುನೊಣಕ್ಕೆ, ಪರ್ವತ ಗಳಲ್ಲೂ ಮರಗಳಲ್ಲೂ ತಟ್ಟಿಗಳ ಮೇಲಿರಿಸಿದ ಬಳ್ಳಿಗಳಲ್ಲೂ ತನ್ನ ತೊಟ್ಟಿಗಳನ್ನು ಕಟ್ಟಿ ಎಲ್ಲಾ ವಿಧದ ಫಲಗಳ ರಸವನ್ನು ಹೀರಿ, ನಿನ್ನ ಪ್ರಭು ಸುಗಮಗೊಳಿಸಿದ ಮಾರ್ಗಗಳಲ್ಲಿ ಚಲಿಸುತ್ತಿರು ಎಂದು 'ವಹ್ಯ್'[19] ಮಾಡಿದನು (ಆದೇಶವಿತ್ತನು). ಆ ನೊಣದ ಹೊಟ್ಟೆಯಿಂದ ವಿವಿಧ ಬಣ್ಣಗಳ ಪಾನಕ ಹೊರಡುತ್ತದೆ. ಅದರಲ್ಲಿ ಜನರಿಗೆ ಗುಣಾಂಶವಿದೆ. ನಿಶ್ಚಯವಾಗಿಯೂ ಚಿಂತನ ಶೀಲರಿಗೆ ಇದರಲ್ಲೂ ಒಂದು ನಿದರ್ಶನವಿದೆ.

وَاَوۡحٰى رَبُّكَ اِلَى النَّحۡلِ اَنِ اتَّخِذِىۡ
مِنَ الۡجِبَالِ بُيُوۡتًا وَّمِنَ الشَّجَرِ
وَمِمَّا يَعۡرِشُوۡنَ ﴿۶۸﴾
ثُمَّ كُلِىۡ مِنۡ كُلِّ الثَّمَرٰتِ فَاسۡلُكِىۡ
سُبُلَ رَبِّكِ ذُلُلًا ؕ يَخۡرُجُ مِنۡۢ بُطُوۡنِهَا
شَرَابٌ مُّخۡتَلِفٌ اَلۡوَانُهٗ فِيۡهِ شِفَآءٌ
لِّلنَّاسِ ؕ اِنَّ فِىۡ ذٰلِكَ لَاٰيَةً لِّقَوۡمٍ يَّتَفَكَّرُوۡنَ ﴿۶۹﴾

70. ಮತ್ತೂ ನೋಡಿರಿ. ಅಲ್ಲಾಹನು ನಿಮ್ಮನ್ನು ಸೃಷ್ಟಿಸಿದನು. ಆ ಮೇಲೆ ಅವನು ನಿಮಗೆ ಮರಣವನ್ನೀಯುತ್ತಾನೆ ಮತ್ತು

وَاللّٰهُ خَلَقَكُمۡ ثُمَّ يَتَوَفّٰٮكُمۡ ۛۚ وَمِنۡكُمۡ مَّنۡ

ಅಲ್ಲಿ ಕಂಡು ಬರುವುದಿಲ್ಲ. ಅಷ್ಟರಲ್ಲಿ ಮಳೆಗಾಲ ಬಂದು ಬಿಡುತ್ತದೆ. ನಾಲ್ಕು ಹನಿಗಳು ಬೀಳುತ್ತಲೇ ಭೂಮಿಯಲ್ಲಿ ಜೀವ ಚೈತನ್ಯ ಗೋಚರಿಸತೊಡಗುತ್ತದೆ. ಭೂತಲದಲ್ಲಿ ಹೂತುಹೋಗಿದ್ದ ಅನೇಕ ಬೇರುಗಳು ಇದ್ದಕ್ಕಿದ್ದಂತೆ ಚಿಗುರುತ್ತವೆ. ಹಿಂದಿನ ಮಳೆಗಾಳದಲ್ಲಿ ಹುಟ್ಟಿದ ಬಳಿಕ ಒಣಗಿ ಸತ್ತು ಹೋಗಿದ್ದ ಸಸ್ಯಗಳೆಲ್ಲವೂ ಪುನಃ ಹೊರಬರುತ್ತವೆ. ಬೇಸಿಗೆಯಲ್ಲಿ ನಾಮಾವಶೇಷವಾಗಿದ್ದ ಮಳೆಗಾಲದ ಹುಳ-ಹುಪ್ಪಟೆಗಳು ಹಿಂದಿನ ಮುಂಗಾರಿನ ಪೂರ್ಣ ವೈಭವದೊಂದಿಗೆ ಮತ್ತೆ ಗೋಚರಿಸತೊಡಗುತ್ತವೆ. ನಿಮ್ಮ ಜೀವಮಾನದಲ್ಲಿ ಈ ಪ್ರಕ್ರಿಯೆಯನ್ನು ಆಗಾಗ ನೀವು ನೋಡುತ್ತಲೇ ಇರುತ್ತೀರಿ. ಆದರೆ ಸತ್ತ ಬಳಿಕ ಮಾನವರೆಲ್ಲರನ್ನೂ ಮತ್ತೆ ಸೃಷ್ಟಿಸಲಾಗುವುದು ಎಂಬ ಪ್ರವಾದಿಯ ಮಾತಿನ ಬಗ್ಗೆ ನೀವು ಆಶ್ಚರ್ಯ ಪ್ರಕಟಿಸುತ್ತೀರಿ.

18. ಇದರಲ್ಲಿ ಆಂಶಿಕವಾಗಿ ಮದ್ಯ ನಿಷಿದ್ಧವಾಗಿದೆ ಮತ್ತು ಅದು ಪರಿಶುದ್ಧ ಆಹಾರವಲ್ಲ ಎಂಬುದನ್ನೂ ಸೂಚಿಸಲಾಗಿದೆ.

19. 'ವಹ್ಯ್'ಯ ಶಬ್ದಾರ್ಥ ಗುಪ್ತವಾದ ಮತ್ತು ಸೂಕ್ಷ್ಮವಾದ ಸೂಚನೆ ಎಂದಾಗಿದೆ. ಸೂಚನೆ ನೀಡುವವನು ಮತ್ತು ಸ್ವೀಕರಿಸುವವನಲ್ಲದೆ ಬೇರಾರೂ ಅದನ್ನು ಅನುಭವಿಸುವುದಿಲ್ಲ. ಇದೇ ಹಿನ್ನೆಲೆಯೊಂದಿಗೆ ಈ ಪದ 'ಇಲ್ಕಾ' ಅರ್ಥಾತ್ ಜ್ಞಾನೋದಯ ಅಥವಾ 'ಇಲ್ಹಾಮ್' ಅರ್ಥಾತ್ ಗುಪ್ತ ಬೋಧನೆ ಎಂಬರ್ಥದಲ್ಲಿ ಪ್ರಯೋಗವಾಗುತ್ತದೆ.

ನಿಮ್ಮಲ್ಲಿ ಕೆಲವರು ಎಲ್ಲವನ್ನೂ ತಿಳಿದ ಅನಂತರವೂ ಏನೂ ತಿಳಿಯದವರಾಗುವಂತೆ ಅತಿ ವೃದ್ಧಾಪ್ಯಕ್ಕೆ ತಲುಪಿಸಲ್ಪಡುತ್ತಾರೆ. ವಾಸ್ತವದಲ್ಲಿ ಅಲ್ಲಾಹನೇ ಸರ್ವಜ್ಞನೂ ಸರ್ವಶಕ್ತನೂ ಆಗಿರುತ್ತಾನೆ.

يُرَدُّ إِلَىٰ أَرْذَلِ الْعُمُرِ لِكَيْ لَا يَعْلَمَ بَعْدَ
عِلْمٍ شَيْئًا ۚ إِنَّ اللَّهَ عَلِيمٌ قَدِيرٌ ﴿٧٠﴾

71. ಇನ್ನೂ ನೋಡಿರಿ, ಅಲ್ಲಾಹನು ನಿಮ್ಮ ಪೈಕಿ ಕೆಲವರಿಗೆ ಕೆಲವರ ಮೇಲೆ ಜೀವನಾಧಾರದಲ್ಲಿ ಶ್ರೇಷ್ಠತೆಯನ್ನು ದಯಪಾಲಿಸಿದ್ದಾನೆ. ಹೀಗೆ ಈ ಶ್ರೇಷ್ಠತೆ ನೀಡಲ್ಪಟ್ಟವರು ತಮ್ಮ ಜೀವನಾಧಾರವನ್ನು ತಮ್ಮ ಗುಲಾಮರಿಗೆ ಕೊಟ್ಟು ಅವರೂ ಜೀವನಾಧಾರದಲ್ಲಿ ಸಮಾನ ಪಾಲುಗಾರರಾಗುವಂತೆ ಮಾಡುವವರಲ್ಲ. ಹೀಗಿರುವಾಗ ಅಲ್ಲಾಹನ ಅನುಗ್ರಹವನ್ನು ಮಾತ್ರ ಇವರು ನಿರಾಕರಿಸುವುದೇ?[20]

وَاللَّهُ فَضَّلَ بَعْضَكُمْ عَلَىٰ بَعْضٍ فِي الرِّزْقِ ۚ
فَمَا الَّذِينَ فُضِّلُوا بِرَادِّي رِزْقِهِمْ عَلَىٰ
مَا مَلَكَتْ أَيْمَانُهُمْ فَهُمْ فِيهِ سَوَاءٌ ۚ
أَفَبِنِعْمَةِ اللَّهِ يَجْحَدُونَ ﴿٧١﴾

72. ನಿಮಗಾಗಿ ನಿಮ್ಮ ವರ್ಗದಿಂದಲೇ ಪತ್ನಿಯರನ್ನುಂಟು ಮಾಡಿದವನು ಅಲ್ಲಾಹನೇ. ಆ ಪತ್ನಿಯರಿಂದ ಅವನೇ ನಿಮಗೆ ಪುತ್ರರನ್ನೂ ಪೌತ್ರರನ್ನೂ ದಯಪಾಲಿಸಿದನು ಮತ್ತು ಉತ್ತಮೋತ್ತಮ ಪದಾರ್ಥಗಳನ್ನು ನಿಮಗೆ ತಿನ್ನಲು ಕೊಟ್ಟನು. ಇನ್ನೇನು ಇವರು (ಇಷ್ಟನ್ನೆಲ್ಲಾ ಕಂಡೂ ತಿಳಿದೂ) ಅಸತ್ಯದಲ್ಲಿ ವಿಶ್ವಾಸವಿರಿಸುತ್ತಾರೆಯೇ?[21] ಮತ್ತು ಅಲ್ಲಾಹನ ಅನುಗ್ರಹಗಳನ್ನು ನಿರಾಕರಿಸುತ್ತಾರೆಯೇ?

وَاللَّهُ جَعَلَ لَكُمْ مِنْ أَنْفُسِكُمْ أَزْوَاجًا
وَجَعَلَ لَكُمْ مِنْ أَزْوَاجِكُمْ بَنِينَ وَحَفَدَةً
وَرَزَقَكُمْ مِنَ الطَّيِّبَاتِ ۚ أَفَبِالْبَاطِلِ
يُؤْمِنُونَ وَبِنِعْمَتِ اللَّهِ هُمْ يَكْفُرُونَ ﴿٧٢﴾

73. ಅಲ್ಲಾಹನನ್ನು ಬಿಟ್ಟು ಆಕಾಶಗಳಿಂದಾಗಲೀ ಭೂಮಿಯಿಂದಾಗಲೀ ಇವರಿಗೆ ಜೀವನಾಧಾರವನ್ನು ಕೊಡುವ ಏನೊಂದೂ

وَيَعْبُدُونَ مِنْ دُونِ اللَّهِ مَا لَا يَمْلِكُ
لَهُمْ رِزْقًا مِنَ السَّمَاوَاتِ وَالْأَرْضِ

20. ಆಧುನಿಕ ಕಾಲದಲ್ಲಿ ಕೆಲವರು ಈ ಸೂಕ್ತಕ್ಕೆ ಈ ರೀತಿಯ ಅರ್ಥವನ್ನು ಕಲ್ಪಿಸುತ್ತಾರೆ, "ಅಲ್ಲಾಹನು ಯಾರಿಗೆ ಜೀವನಾಧಾರಗಳಲ್ಲಿ ಸಮೃದ್ಧಿ ದಯಪಾಲಿಸಿದ್ದಾನೋ ಅವರು ಅದನ್ನು ತಮ್ಮ ನೌಕರರಿಗೆ ಮತ್ತು ಗುಲಾಮರಿಗೆ ಮರಳಿಸಬೇಕಾಗಿದೆ. ಒಂದು ವೇಳೆ ಅವರು ಮರಳಿಸದಿದ್ದರೆ ಅಲ್ಲಾಹನ ಅನುಗ್ರಹಕ್ಕೆ ಕೃತಘ್ನತೆ ತೋರಿದಂತಾಗುತ್ತದೆ." ನಿಜವಾಗಿ ಪೂರ್ವೋಕ್ತ ಉಪನ್ಯಾಸ ಆರಂಭದಿಂದಲೂ ಬಹುದೇವವಾದದ ನಿರಾಕರಣೆ ಮತ್ತು ಏಕದೇವತ್ವದ ಸಮರ್ಥನೆಯ ಕುರಿತಾಗಿದೆ. ಮುಂದೆಯೂ ನಿರಂತರ ಇದೇ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಹಿನ್ನೆಲೆಯನ್ನು ಗಮನಿಸಿದಾಗ ಇಲ್ಲಿಯೂ ಇದೇ ವಿಷಯಕ್ಕೆ ಒತ್ತುಕೊಡಲಾಗಿದೆ ಎಂದು ಸ್ಪಷ್ಟವಾಗುತ್ತದೆ. ನೀವು ಸ್ವತಃ ನಿಮ್ಮ ಗುಲಾಮರು ಮತ್ತು ನೌಕರರಿಗೆ ಸಮಾನ ಸ್ಥಾನಮಾನ ಕೊಡುವುದಿಲ್ಲ. ಹಾಗಿರುವಾಗ ಅಲ್ಲಾಹನು ನಿಮಗೆ ಮಾಡಿರುವ ಉಪಕಾರಗಳಿಗೆ ಪ್ರತಿಯಾಗಿ ಅಲ್ಲಾಹನಿಗೆ ಕೃತಜ್ಞತಾರ್ಪಣೆ ಮಾಡುವಾಗ ಯಾವ ರೀತಿಯ ಅಧಿಕಾರಗಳೂ ಇಲ್ಲದ ದೇವನ ದಾಸರನ್ನೂ ಏಕೆ ಅವನಿಗೆ ಭಾಗಿದಾರರನ್ನಾಗಿ ನಿಲ್ಲಿಸುತ್ತೀರಿ? ಅಧಿಕಾರ ಮತ್ತು ಹಕ್ಕುಗಳಲ್ಲಿ ಅವರು ದೇವನಿಗೆ ಸಮಾನವಾದ ಪಾಲನ್ನು ಹೊಂದಿದ್ದಾರೆಂದು ಏಕೆ ಭಾವಿಸುತ್ತೀರಿ?

21. ಅರ್ಥಾತ್ ಸತ್ಯದೂರ ಮತ್ತು ನಿರಾಧಾರವಾದ ವಿಶ್ವಾಸವನ್ನು ಹೊಂದಿದ್ದಾರೆ. ಅವರ ಅದೃಷ್ಟ ಖುಲಾಯಿಸುವಂತೆ ಮಾಡುವುದು ಅಥವಾ ಕೆಡಿಸುವುದು, ಇಷ್ಟಾರ್ಥವನ್ನು ಈಡೇರಿಸುವುದು, ಪ್ರಾರ್ಥನೆಗಳನ್ನು ಆಲಿಸುವುದು, ಸಂತಾನಭಾಗ್ಯ ದಯಪಾಲಿಸುವುದು, ನೌಕರಿ ದೊರೆಯುವಂತೆ ಮಾಡುವುದು, ಮೊಕದ್ದಮೆಗಳಲ್ಲಿ ಗೆಲ್ಲುವಂತೆ ಮಾಡುವುದು ಮತ್ತು ರೋಗರುಜಿನಗಳಿಂದ ರಕ್ಷಿಸುವುದು, ದೇವಿ-ದೇವತೆಗಳ, ಜಿನ್ನ್‌ಗಳ ಹಾಗೂ ಗತಮಹಾಪುರುಷರ ಅಧಿಕಾರದಲ್ಲಿರುವಂತಹ ವಿಷಯಗಳು ಎಂದು ಅವರು ಭಾವಿಸುತ್ತಾರೆ.

ಅಧಿಕಾರವಿರದ ಮತ್ತು ಈ ಕೆಲಸವನ್ನು ಮಾಡಲು ಸಾಧ್ಯವೇ ಇಲ್ಲದಂತಹ ಇತರರನ್ನು ಇವರು ಆರಾಧಿಸುತ್ತಾರೆಯೇ?

شَيْـًٔا وَّلَا يَسْتَطِيْعُوْنَ ۝٧٣

74. ಆದುದರಿಂದ ಅಲ್ಲಾಹನಿಗೆ ಹೋಲಿಕೆಗಳನ್ನು ಕಲ್ಪಿಸಬೇಡಿರಿ.[22] ಅಲ್ಲಾಹನಿಗೆ ತಿಳಿದಿದೆ, ನಿಮಗೆ ತಿಳಿದಿಲ್ಲ.

فَلَا تَضْرِبُوْا لِلّٰهِ الْاَمْثَالَ ۗ اِنَّ اللّٰهَ يَعْلَمُ وَاَنْتُمْ لَا تَعْلَمُوْنَ ۝٧٤

75. ಅಲ್ಲಾಹನು ಒಂದು ಉಪಮೆ ಕೊಡುತ್ತಾನೆ. ಒಬ್ಬನು ಗುಲಾಮನಾಗಿದ್ದು ಪರಾಧೀನನಾಗಿರುತ್ತಾನೆ. ಅವನಿಗೆ ಸ್ವಂತ ಅಧಿಕಾರವೇನೂ ಇಲ್ಲ. ಇನ್ನೊಬ್ಬನಿಗೆ ನಾವು ನಮ್ಮ ಕಡೆಯಿಂದ ಉತ್ತಮ ಜೀವನಾಧಾರವನ್ನು ನೀಡಿದ್ದೇವೆ. ಅವನು ಅದರಿಂದ ರಹಸ್ಯವಾಗಿಯೂ ಬಹಿರಂಗವಾಗಿಯೂ ಚೆನ್ನಾಗಿ ಖರ್ಚು ಮಾಡುತ್ತಾನೆ. ಇವರಿಬ್ಬರು ಸರಿಸಮಾನರಾಗಿರುವರೇ? ಹೇಳಿರಿ- 'ಅಲ್‌ಹಮ್ದು ಲಿಲ್ಲಾಹ್'[23] (ಸಕಲ ಸ್ತೋತ್ರಗಳು ಅಲ್ಲಾಹನಿಗೆ). ಆದರೆ ಹೆಚ್ಚಿನವರು (ಈ ಸರಳವಾದ ಮಾತನ್ನೂ) ಅರಿಯುವುದಿಲ್ಲ.

ضَرَبَ اللّٰهُ مَثَلًا عَبْدًا مَّمْلُوْكًا لَّا يَقْدِرُ عَلٰى شَيْءٍ وَّمَنْ رَّزَقْنٰهُ مِنَّا رِزْقًا حَسَنًا فَهُوَ يُنْفِقُ مِنْهُ سِرًّا وَّجَهْرًا ۗ هَلْ يَسْتَوٗنَ ۗ اَلْحَمْدُ لِلّٰهِ ۗ بَلْ اَكْثَرُهُمْ لَا يَعْلَمُوْنَ ۝٧٥

76. ಅಲ್ಲಾಹನು ಇನ್ನೊಂದು ಉಪಮೆ ಕೊಡುತ್ತಾನೆ; ಇಬ್ಬರಿದ್ದಾರೆ. ಒಬ್ಬನು ಮೂಕನು. ಯಾವ ಕೆಲಸವನ್ನೂ ಮಾಡಲಾರ. ತನ್ನ ಯಜಮಾನನಿಗೆ ಹೊರೆಯಾಗಿದ್ದಾನೆ. ಅವನು ಇವನನ್ನು ಎತ್ತ ಕಳುಹಿಸಿದರೂ ಯಾವ ಒಳ್ಳೆಯ ಕಾರ್ಯವೂ ಇವನಿಂದಾಗುವುದಿಲ್ಲ. ಇನ್ನೊಬ್ಬನು ನ್ಯಾಯದ ಆಜ್ಞೆ ಕೊಡುತ್ತಾನೆ ಮತ್ತು ಸ್ವತಃ ನೇರಮಾರ್ಗದಲ್ಲಿ ನೆಲೆ ನಿಂತಿದ್ದಾನೆ. ಹೇಳಿರಿ! ಇವರಿಬ್ಬರು ಸರಿಸಮಾನರಾಗಿರುವರೇ?

وَضَرَبَ اللّٰهُ مَثَلًا رَّجُلَيْنِ اَحَدُهُمَآ اَبْكَمُ لَا يَقْدِرُ عَلٰى شَيْءٍ وَّهُوَ كَلٌّ عَلٰى مَوْلٰىهُ ۙ اَيْنَمَا يُوَجِّهْهُّ لَا يَاْتِ بِخَيْرٍ ۗ هَلْ يَسْتَوِيْ هُوَ ۙ وَمَنْ يَّاْمُرُ بِالْعَدْلِ ۙ وَهُوَ عَلٰى صِرَاطٍ مُّسْتَقِيْمٍ ۝٧٦

77. ಭೂಮಿ-ಆಕಾಶಗಳ ಅಗೋಚರ ಸತ್ಯಗಳ ಜ್ಞಾನ ಅಲ್ಲಾಹನಿಗೆ ಮಾತ್ರವಿದೆ. ಪ್ರಳಯದ ಸಂಭವವು ಮನುಷ್ಯನು ರೆಪ್ಪೆ ಬಡಿಯುವುದರೊಳಗೆ ಅಥವಾ ಅದಕ್ಕಿಂತಲೂ ಕಡಿಮೆ ಸಮಯದೊಳಗಾಗುವುದು. ವಾಸ್ತವದಲ್ಲಿ ಅಲ್ಲಾಹನು ಎಲ್ಲವನ್ನೂ ಮಾಡಬಲ್ಲನು.

وَلِلّٰهِ غَيْبُ السَّمٰوٰتِ وَالْاَرْضِ ۗ وَمَآ اَمْرُ السَّاعَةِ اِلَّا كَلَمْحِ الْبَصَرِ اَوْ هُوَ اَقْرَبُ ۗ اِنَّ اللّٰهَ عَلٰى كُلِّ شَيْءٍ قَدِيْرٌ ۝٧٧

78. ಅಲ್ಲಾಹನು ನೀವು ಏನೂ ಅರಿಯದ ಸ್ಥಿತಿಯಲ್ಲಿ ನಿಮ್ಮನ್ನು

وَاللّٰهُ اَخْرَجَكُمْ مِّنْ بُطُوْنِ اُمَّهٰتِكُمْ لَا

---

22. ಅರ್ಥಾತ್- ಲೋಕದ ಚಕ್ರವರ್ತಿಗಳು ಮತ್ತು ರಾಜ ಮಹಾರಾಜರುಗಳಂತೆ ಅವನಿದ್ದಾನೆಂದು ಭಾವಿಸದಿರಿ. ನಿಕಟವರ್ತಿಗಳ ಮತ್ತು ಆಸ್ಥಾನದ ಆಪ್ತರ ಮಧ್ಯವರ್ತಿಕೆ ಇಲ್ಲದೆ ನಿಮ್ಮ ಅರ್ಜಿಗಳನ್ನು ರಾಜರುಗಳಿಗೆ ತಲಪಿಸಲು ಸಾಧ್ಯವಾಗದಿರುವಂತೆ ದೇವನ ಬಗ್ಗೆಯೂ ನೀವು ಕಲ್ಪಿಸಿಕೊಳ್ಳದಿರಿ. ಅವನು ತನ್ನ ದೇವಚರರು, ಮಹಾಪುರುಷರು ಮತ್ತಿತರ ಆಪ್ತರಿಂದ ಸುತ್ತುವರಿಯಲ್ಪಟ್ಟಿದ್ದಾನೆ. ಅವರ ಮಧ್ಯವರ್ತಿಕೆ ಇಲ್ಲದೆ ಯಾವ ಕೆಲಸವೂ ಸಾಧಿತವಾಗದು ಎಂದು ಭಾವಿಸದಿರಿ.

23. ಈ ಪ್ರಶ್ನೆಗೆ ಉತ್ತರವಾಗಿ ಬಹುದೇವಾರಾಧಕರು ಅವರಿಬ್ಬರೂ ಸಮಾನರಾಗಿದ್ದಾರೆ ಎಂದು ಹೇಳುವಂತಿರಲಿಲ್ಲ. ಆದ್ದರಿಂದ ಅಲ್ಲಾಹನು 'ಅಲ್ಲಾಹನಿಗೆ ಸ್ತುತಿ' ಇಷ್ಟು ವಿಷಯ ನಿಮ್ಮ ತಿಳುವಳಿಕೆಗೆ ಬಂದು ಬಿಟ್ಟಿತು ಎಂದು ಹೇಳುತ್ತಿದ್ದಾನೆ.

ನಿಮ್ಮ ತಾಯಂದಿರ ಹೊಟ್ಟೆಗಳಿಂದ ಹೊರ ತಂದನು. ನೀವು ಕೃತಜ್ಞರಾಗಲಿಕ್ಕಾಗಿ. ಅವನು ನಿಮಗೆ ಶ್ರವಣ ಶಕ್ತಿಯನ್ನೂ ದೃಷ್ಟಿಗಳನ್ನೂ ವಿಚಾರ ಮಾಡುವ ಮನಸ್ಸುಗಳನ್ನೂ ನೀಡಿದನು.

تَعْلَمُوْنَ شَيْـًٔا ۙ وَّجَعَلَ لَكُمُ السَّمْعَ وَالْاَبْصَارَ وَالْاَفْـِٕدَةَ ۙ لَعَلَّكُمْ تَشْكُرُوْنَ ﴿٧٨﴾

79. ಪಕ್ಷಿಗಳು ಅಂತರಿಕ್ಷದಲ್ಲಿ ಹೇಗೆ ನಿಯಂತ್ರಣಕ್ಕೊಳಗಾಗಿವೆಯೆಂಬುದನ್ನು ಇವರೆಂದೂ ನೋಡಲಿಲ್ಲವೇ? ಅವುಗಳನ್ನು ಅಲ್ಲಾಹನ ಹೊರತು ಇನ್ನಾರು ಆಧರಿಸಿದ್ದಾರೆ? ಸತ್ಯವಿಶ್ವಾಸವಿರಿಸುವವರಿಗೆ ಇದರಲ್ಲಿ ತುಂಬಾ ನಿದರ್ಶನಗಳಿವೆ.

اَلَمْ يَرَوْا اِلَى الطَّيْرِ مُسَخَّرٰتٍ فِيْ جَوِّ السَّمَآءِ ؕ مَا يُمْسِكُهُنَّ اِلَّا اللّٰهُ ؕ اِنَّ فِيْ ذٰلِكَ لَاٰيٰتٍ لِّقَوْمٍ يُّؤْمِنُوْنَ ﴿٧٩﴾

80. ಅಲ್ಲಾಹನು ನಿಮಗಾಗಿ ನಿಮ್ಮ ಮನೆಗಳನ್ನು ನೆಮ್ಮದಿಯ ಸ್ಥಾನವನ್ನಾಗಿ ಮಾಡಿದನು. ಅವನು ಪ್ರಾಣಿಗಳ ತೊಗಲಿನಿಂದ ನಿಮಗಾಗಿ ಮನೆ(ಡೇರೆ)ಗಳನ್ನು ಮಾಡಿದನು.[24] ನೀವು ಅವುಗಳನ್ನು ಪ್ರಯಾಣ ಮತ್ತು ತಂಗು ಇವೆರಡೂ ಸ್ಥಿತಿಗಳಲ್ಲಿ ಹಗುರವಾಗಿ ಕಾಣುತ್ತೀರಿ. ಅಲ್ಲಾಹನು ಅವುಗಳ ತುಪ್ಪಳ, ಉಣ್ಣೆ ಮತ್ತು ರೋಮಗಳಿಂದ ಬಾಳಿನುದ್ದಕ್ಕೂ ನಿಮ್ಮ ಉಪಯೋಗಕ್ಕೆ ಬರುವಂತಹ ಅನೇಕ ಉಡುವ ಮತ್ತು ಬಳಕೆಯ ವಸ್ತುಗಳನ್ನು ಸೃಷ್ಟಿಸಿದನು.

وَاللّٰهُ جَعَلَ لَكُمْ مِّنْۢ بُيُوْتِكُمْ سَكَنًا وَّجَعَلَ لَكُمْ مِّنْ جُلُوْدِ الْاَنْعَامِ بُيُوْتًا تَسْتَخِفُّوْنَهَا يَوْمَ ظَعْنِكُمْ وَيَوْمَ اِقَامَتِكُمْ ۙ وَمِنْ اَصْوَافِهَا وَاَوْبَارِهَا وَاَشْعَارِهَاۤ اَثَاثًا وَّمَتَاعًا اِلٰى حِيْنٍ ﴿٨٠﴾

81. ಅಲ್ಲಾಹನು ತಾನು ಸೃಷ್ಟಿಸಿದ ಅನೇಕ ವಸ್ತುಗಳಿಂದ ನಿಮಗಾಗಿ ನೆರಳಿನ ವ್ಯವಸ್ಥೆ ಮಾಡಿದನು. ಪರ್ವತಗಳಲ್ಲಿ ನಿಮಗಾಗಿ ಆಶ್ರಯ ಸ್ಥಾನಗಳನ್ನು ಮಾಡಿದನು. ನಿಮಗೆ, ಉಷ್ಣದಿಂದ ರಕ್ಷಿಸತಕ್ಕ ಉಡುಪನ್ನೂ ಪರಸ್ಪರರೊಳಗಿನ ಯುದ್ಧದಲ್ಲಿ ನಿಮಗೆ ರಕ್ಷಣೆ ನೀಡುವಂತಹ ಬೇರೆ ಕೆಲವು ಉಡುಪುಗಳನ್ನೂ ದಯಪಾಲಿಸಿದನು. ಹೀಗೆ ನೀವು ಆಜ್ಞಾನುಸಾರಿಗಳಾಗಬಹುದೆಂದು ಅವನು ನಿಮ್ಮ ಮೇಲೆ ತನ್ನ 'ಕೊಡುಗೆ'ಗಳನ್ನು ಪೂರ್ತಿಗೊಳಿಸುತ್ತಾನೆ.

وَاللّٰهُ جَعَلَ لَكُمْ مِّمَّا خَلَقَ ظِلٰلًا وَّجَعَلَ لَكُمْ مِّنَ الْجِبَالِ اَكْنَانًا وَّجَعَلَ لَكُمْ سَرَابِيْلَ تَقِيْكُمُ الْحَرَّ وَسَرَابِيْلَ تَقِيْكُمْ بَاْسَكُمْ ؕ كَذٰلِكَ يُتِمُّ نِعْمَتَهٗ عَلَيْكُمْ لَعَلَّكُمْ تُسْلِمُوْنَ ﴿٨١﴾

82. ಹೀಗಿರುತ್ತ ಇವರು ವಿಮುಖರಾಗುತ್ತಾರಾದರೆ, ಓ ಪೈಗಂಬರರೇ, ಸತ್ಯ ಸಂದೇಶವನ್ನು ಸುವ್ಯಕ್ತವಾಗಿ ತಲಪಿಸುವುದಷ್ಟೇ ನಿಮ್ಮ ಹೊಣೆಯಾಗಿರುತ್ತದೆ.

فَاِنْ تَوَلَّوْا فَاِنَّمَا عَلَيْكَ الْبَلٰغُ الْمُبِيْنُ ﴿٨٢﴾

83. ಇವರು ಅಲ್ಲಾಹನ 'ಭವ್ಯಕೊಡುಗೆ'ಯನ್ನು ಅರಿಯುತ್ತಾರೆ; ಅನಂತರ ನಿರಾಕರಿಸುತ್ತಾರೆ ಮತ್ತು ಇವರಲ್ಲಿ ಹೆಚ್ಚಿನವರು ಸತ್ಯವನ್ನು ಸ್ವೀಕರಿಸಿಕೊಳ್ಳಲಿಕ್ಕೇ ಸಿದ್ಧರಿಲ್ಲ.

يَعْرِفُوْنَ نِعْمَتَ اللّٰهِ ثُمَّ يُنْكِرُوْنَهَا وَاَكْثَرُهُمُ الْكٰفِرُوْنَ ﴿٨٣﴾

24. ಅರ್ಥಾತ್- ಚರ್ಮದಿಂದ ನಿರ್ಮಿತವಾದ ಡೇರೆಗಳು. ಅದರ ಬಳಕೆ ಅರೇಬಿಯಾದಲ್ಲಿ ಹೆಚ್ಚಾಗಿದೆ.

84. ಆ ದಿನ ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯನ್ನು ನಿಲ್ಲಿಸುವೆವು. (ಅಂದು ಏನಾಗುವುದೆಂಬ ಕಿಂಚಿತ್ ಪ್ರಜ್ಞೆಯಾದರೂ ಇವರಿಗಿದೆಯೇ?) ಸತ್ಯನಿಷೇಧಿಗಳಿಗೆ ಕುತರ್ಕಗಳನ್ನು ಮುಂದಿರಿಸಲಿಕ್ಕೂ ಅವಕಾಶ ದೊರೆಯಲಾರದು.[25] ಅವರಿಂದ ಪಶ್ಚಾತ್ತಾಪ ಹಾಗೂ ಕ್ಷಮಾಯಾಚನೆಯ ತಗಾದೆಯನ್ನೂ ಮಾಡಲಾಗದು.

وَيَوْمَ نَبْعَثُ مِن كُلِّ أُمَّةٍ شَهِيدًا ثُمَّ
لَا يُؤْذَنُ لِلَّذِينَ كَفَرُوا وَلَا هُمْ يُسْتَعْتَبُونَ ﴿٨٤﴾

85. ಅಕ್ರಮಿಗಳು ಒಮ್ಮೆ ಯಾತನೆಗೊಳಗಾದ ಬಳಿಕ ಅವರ ಯಾತನೆಯಲ್ಲಿ ಸ್ವಲ್ಪವೂ ಕಡಿತ ಮಾಡಲಾಗದು ಮತ್ತು ಒಂದು ಕ್ಷಣ ಕಾಲದ ಅವಕಾಶವೂ ಕೊಡಲಾಗದು.

وَإِذَا رَأَى الَّذِينَ ظَلَمُوا الْعَذَابَ فَلَا
يُخَفَّفُ عَنْهُمْ وَلَا هُمْ يُنظَرُونَ ﴿٨٥﴾

86. ಇಹಲೋಕದಲ್ಲಿ 'ಬಹುದೇವವಿಶ್ವಾಸ' ಕೈಗೊಂಡವರು ತಾವು ನಿಶ್ಚಯಿಸಿಕೊಂಡಿದ್ದ ಸಹಭಾಗಿಗಳನ್ನು ಕಂಡಾಗ, "ಓ ನಮ್ಮ ಪ್ರಭೂ, ನಿನ್ನನ್ನು ಬಿಟ್ಟು ನಾವು ಪ್ರಾರ್ಥಿಸುತ್ತಿದ್ದ ಸಹಭಾಗಿಗಳು ಇವರೇ" ಎಂದು ಹೇಳುವರು. ಆಗ ಅವರ ಆ ಆರಾಧ್ಯರು, "ನೀವು ಸುಳ್ಳುಗಾರರು"[26] ಎಂದು ನಿಖರವಾಗಿ ಉತ್ತರ ಕೊಡುವರು.

وَإِذَا رَأَى الَّذِينَ أَشْرَكُوا شُرَكَاءَهُمْ
قَالُوا رَبَّنَا هَٰؤُلَاءِ شُرَكَاؤُنَا الَّذِينَ كُنَّا
نَدْعُو مِن دُونِكَ ۖ فَأَلْقَوْا إِلَيْهِمُ الْقَوْلَ
إِنَّكُمْ لَكَاذِبُونَ ﴿٨٦﴾

87. ಆಗ ಇವರೆಲ್ಲರೂ ಅಲ್ಲಾಹನ ಮುಂದೆ ಶರಣು ಹೋಗುವರು ಮತ್ತು ಈ ಲೋಕದಲ್ಲಿ ಮಾಡುತ್ತಿದ್ದ ಅವರ ಸುಳ್ಳು ಸೃಷ್ಟನೆಗಳೆಲ್ಲ ಮಾಯವಾಗಿ ಹೋಗುವುವು.

وَأَلْقَوْا إِلَى اللَّهِ يَوْمَئِذٍ السَّلَمَ ۖ وَضَلَّ
عَنْهُم مَّا كَانُوا يَفْتَرُونَ ﴿٨٧﴾

88. ಸ್ವತಃ 'ಸತ್ಯನಿಷೇಧ' ಮಾರ್ಗವನ್ನು ಕೈಗೊಂಡವರಿಗೂ ಇತರರನ್ನು ಅಲ್ಲಾಹನ ಮಾರ್ಗದಿಂದ ತಡೆದವರಿಗೂ ಅವರು ಇಹಲೋಕದಲ್ಲಿ ಮಾಡುತ್ತಿದ್ದ ಕಿಡಿಗೇಡಿತನದ ಪ್ರತಿಫಲವಾಗಿ ನಾವು ಯಾತನೆಯ ಮೇಲೆ ಯಾತನೆ ಕೊಡುವೆವು.

الَّذِينَ كَفَرُوا وَصَدُّوا عَن سَبِيلِ اللَّهِ
زِدْنَاهُمْ عَذَابًا فَوْقَ الْعَذَابِ بِمَا كَانُوا
يُفْسِدُونَ ﴿٨٨﴾

89. (ಓ ಪೈಗಂಬರರೇ, ಇವರಿಗೆ ಆ ದಿನದ ಬಗ್ಗೆ ಎಚ್ಚರಿಕೆ ನೀಡಿರಿ.) ಅಂದು ನಾವು ಪ್ರತಿಯೊಂದು ಸಮುದಾಯದಲ್ಲಿ ಅದರ ವಿರುದ್ಧ ಸಾಕ್ಷ್ಯ ಹೇಳುವ ಒಬ್ಬ ಸಾಕ್ಷಿದಾರನನ್ನು ಅದರೊಳಗಿಂದಲೇ ಎಬ್ಬಿಸುವೆವು ಮತ್ತು ಇವರ ವಿರುದ್ಧ ಸಾಕ್ಷ್ಯ ಹೇಳಲು

وَيَوْمَ نَبْعَثُ فِي كُلِّ أُمَّةٍ شَهِيدًا عَلَيْهِم
مِّنْ أَنفُسِهِمْ ۖ وَجِئْنَا بِكَ شَهِيدًا عَلَىٰ
هَٰؤُلَاءِ ۚ وَنَزَّلْنَا عَلَيْكَ الْكِتَابَ تِبْيَانًا

25. ಅವರಿಗೆ ಸ್ಪಷ್ಟೀಕರಣದ ಅನುಮತಿ ನೀಡಲಾಗುವುದಿಲ್ಲವೆಂದು ಇದರ ಅರ್ಥವಲ್ಲ. ಬದಲಾಗಿ ಅವರ ಅಪರಾಧಗಳನ್ನು ಯಾವ ರೀತಿಯ ಸ್ಪಷ್ಟನೆಗೂ ಆಸ್ಪದವಿಲ್ಲದಂತಹ ಸುವ್ಯಕ್ತವಾದ ಮತ್ತು ನಿರಾಕರಿಸಲು ಸಾಧ್ಯವಾಗದಂತಹ ಆಧಾರ ಪ್ರಮಾಣಗಳ ಮೂಲಕ ಸಾಬೀತು ಪಡಿಸಲಾಗುವುದು.

26. ಅರ್ಥಾತ್- ದೇವನನ್ನು ಬಿಟ್ಟು ನಮ್ಮನ್ನು ಕರೆದು ಪ್ರಾರ್ಥಿಸುವಂತೆ ನಾವೆಂದೂ ನಿಮಗೆ ಹೇಳಿರಲಿಲ್ಲ. ನಾವು ನಿಮ್ಮ ಕೃತ್ಯದ ಬಗ್ಗೆ ಸಂತುಷ್ಟರಾಗಿರಲಿಲ್ಲ. ಮಾತ್ರವಲ್ಲ ನೀವು ನಮ್ಮನ್ನು ಪ್ರಾರ್ಥಿಸುತ್ತಿರುವ ಬಗ್ಗೆ ನಮಗೆ ತಿಳುವಳಿಕೆಯೇ ಇರಲಿಲ್ಲ.

لِّكُلِّ شَيْءٍ وَّهُدًى وَّرَحْمَةً وَّبُشْرٰى لِلْمُسْلِمِيْنَ ﴿٨٩﴾

ನಾವು ನಿಮ್ಮನ್ನು ತರುವೆವು. (ಆ ಸಾಕ್ಷ್ಯಕ್ಕೆ ಪೂರ್ವ ಸಿದ್ಧತೆಯಾಗಿಯೇ) ನಾವು ನಿಮಗೆ ಈ ಗ್ರಂಥವನ್ನು ಅವತೀರ್ಣಗೊಳಿಸಿದ್ದೇವೆ. ಇದು ಪ್ರತಿಯೊಂದು ವಸ್ತುವನ್ನು ಸುವ್ಯಕ್ತವಾಗಿ ವಿವರಿಸುವಂತಹದೂ ಆಜ್ಞಾನುಸರಣೆ ಮಾಡುವವರಿಗೆ ಮಾರ್ಗ ದರ್ಶನವೂ ಕೃಪೆಯೂ ಸುವಾರ್ತೆಯೂ ಆಗಿರುತ್ತದೆ.

اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآئِ ذِى الْقُرْبٰى وَيَنْهٰى عَنِ الْفَحْشَآءِ وَالْمُنْكَرِ وَالْبَغْيِ ۚ يَعِظُكُمْ لَعَلَّكُمْ تَذَكَّرُوْنَ ﴿٩٠﴾

90. ಅಲ್ಲಾಹ್ ನ್ಯಾಯ, ಪರೋಪಕಾರ ಹಾಗೂ ಆಪ್ತೇಷ್ಟರ ಬಗ್ಗೆ ಸೌಜನ್ಯದ ಆಜ್ಞೆ ನೀಡುತ್ತಾನೆ ಮತ್ತು ಅಶ್ಲೀಲ ಕಾರ್ಯ, ದುಷ್ಕೃತ್ಯ, ಅಕ್ರಮ, ಅತ್ಯಾಚಾರಗಳನ್ನು ನಿಷೇಧಿಸುತ್ತಾನೆ. ನೀವು ಜಾಗೃತರಾಗಲಿಕ್ಕಾಗಿ ಅವನು ನಿಮಗೆ ಉಪದೇಶ ನೀಡುತ್ತಾನೆ.

وَاَوْفُوْا بِعَهْدِ اللّٰهِ اِذَا عٰهَدْتُّمْ وَلَا تَنْقُضُوا الْاَيْمَانَ بَعْدَ تَوْكِيْدِهَا وَقَدْ جَعَلْتُمُ اللّٰهَ عَلَيْكُمْ كَفِيْلًا ۭ اِنَّ اللّٰهَ يَعْلَمُ مَا تَفْعَلُوْنَ ﴿٩١﴾

91. ನೀವು ಅಲ್ಲಾಹನೊಡನೆ ಕರಾರು ಮಾಡಿಕೊಂಡಿದ್ದರೆ ಅದನ್ನು ಪಾಲಿಸಿರಿ. ನೀವು ಅಲ್ಲಾಹನನ್ನು ನಿಮ್ಮ ಮೇಲೆ ಸಾಕ್ಷ್ಯ ನಿಲ್ಲಿಸಿಕೊಂಡು ಮಾಡಿದ ಪ್ರತಿಜ್ಞೆಗಳನ್ನು ಮುರಿಯಬೇಡಿರಿ. ನಿಶ್ಚಯವಾಗಿಯೂ ನಿಮ್ಮ ಸಕಲ ಕರ್ಮಗಳನ್ನೂ ಅಲ್ಲಾಹನು ತಿಳಿದಿರುತ್ತಾನೆ.

وَلَا تَكُوْنُوْا كَالَّتِيْ نَقَضَتْ غَزْلَهَا مِنْ بَعْدِ قُوَّةٍ اَنْكَاثًا ۭ تَتَّخِذُوْنَ اَيْمَانَكُمْ دَخَلًا بَيْنَكُمْ اَنْ تَكُوْنَ اُمَّةٌ هِيَ اَرْبٰى مِنْ اُمَّةٍ ۭ اِنَّمَا يَبْلُوْكُمُ اللّٰهُ بِهٖ ۭ وَلَيُبَيِّنَنَّ لَكُمْ يَوْمَ الْقِيٰمَةِ مَا كُنْتُمْ فِيْهِ تَخْتَلِفُوْنَ ﴿٩٢﴾

92. ತಾನೇ ಶ್ರಮವಹಿಸಿ ನೂಲು ನೂತು ಅನಂತರ ತಾನೇ ಅದನ್ನು ತುಂಡು ತುಂಡಾಗಿಸುವ ಸ್ತ್ರೀಯಂತೆ ನಿಮ್ಮ ಸ್ಥಿತಿ ಆಗಬಾರದು. ಒಂದು ಜನಾಂಗವು ಇನ್ನೊಂದು ಜನಾಂಗಕ್ಕಿಂತ ಹೆಚ್ಚು ಲಾಭ ಹೊಂದಲಿಕ್ಕಾಗಿ ನೀವು ನಿಮ್ಮ ಪ್ರತಿಜ್ಞೆಗಳನ್ನು ಪರಸ್ಪರರ ವ್ಯವಹಾರಗಳಲ್ಲಿ ಕುಟಿಲತೆ ಹಾಗೂ ಧೂರ್ತತನದ ಸಾಧನವನ್ನಾಗಿ ಮಾಡುತ್ತೀರಿ. ವಸ್ತುತಃ ಅಲ್ಲಾಹನು ಈ ಪ್ರತಿಜ್ಞೆಗಳ ಮೂಲಕ ನಿಮ್ಮನ್ನು ಪರೀಕ್ಷೆಗೊಳಪಡಿಸುತ್ತಾನೆ ಮತ್ತು ಅವನು ಪುನರುತ್ಥಾನ ದಿನದಂದು ನಿಮ್ಮ ಎಲ್ಲಾ ಭಿನ್ನಾಭಿಪ್ರಾಯಗಳ ವಾಸ್ತವಿಕತೆಯನ್ನು ನಿಮ್ಮ ಮುಂದೆ ಪ್ರಕಟಗೊಳಿಸುವನು.

وَلَوْ شَآءَ اللّٰهُ لَجَعَلَكُمْ اُمَّةً وَّاحِدَةً وَّلٰكِنْ يُّضِلُّ مَنْ يَّشَآءُ وَيَهْدِيْ مَنْ يَّشَآءُ ۭ وَلَتُسْـَٔلُنَّ عَمَّا كُنْتُمْ تَعْمَلُوْنَ ﴿٩٣﴾

93. ಅಲ್ಲಾಹನ ಇಚ್ಛೆ ಇದಾಗಿರುತ್ತಿದ್ದರೆ (ನಿಮ್ಮೊಳಗೆ ಭಿನ್ನಾಭಿಪ್ರಾಯವಿರಬಾರದೆಂದಿರುತ್ತಿದ್ದರೆ) ಅವನು ನಿಮ್ಮೆಲ್ಲರನ್ನೂ ಒಂದೇ ಸಮುದಾಯವನ್ನಾಗಿ ಮಾಡಿಬಿಡುತ್ತಿದ್ದನು. ಆದರೆ ಅವನು ತನಗಿಷ್ಟ ಬಂದವರನ್ನು ಪಥಭ್ರಷ್ಟತೆಗೊಳಪಡಿಸುತ್ತಾನೆ ಮತ್ತು ತನಗಿಷ್ಟ ಬಂದವರಿಗೆ ಸನ್ಮಾರ್ಗವನ್ನು ತೋರುತ್ತಾನೆ ಮತ್ತು ಖಂಡಿತವಾಗಿಯೂ ನಿಮ್ಮ ಕರ್ಮಗಳ ಬಗ್ಗೆ ನಿಮ್ಮನ್ನು ವಿಚಾರಿಸಿಯೇ ತೀರಲಾಗುವುದು.

94. (ಓ ಮುಸ್ಲಿಮರೇ,) ನೀವು ನಿಮ್ಮ ಪ್ರತಿಜ್ಞೆಗಳನ್ನು ಪರಸ್ಪರರನ್ನು ವಂಚಿಸುವ ಸಾಧನವನ್ನಾಗಿ ಮಾಡಿಕೊಳ್ಳಬೇಡಿರಿ. ನಿಮ್ಮ ಪಾದಗಳು ಸ್ಥಿರಗೊಂಡ ಬಳಿಕ ಕಿತ್ತು ಹೋಗುವಂತಾಗಬಾರದು. ನೀವು ಜನರನ್ನು ಅಲ್ಲಾಹನ ಮಾರ್ಗದಿಂದ ತಡೆದ ಅಪರಾಧಕ್ಕಾಗಿ ಕೆಟ್ಟ ಪರಿಣಾಮವನ್ನು ಕಾಣುವಂತೆಯೂ ಘೋರ ಶಿಕ್ಷೆಯನ್ನು ಅನುಭವಿಸುವಂತೆಯೂ ಆಗಿಬಿಡಬಾರದು.[27]

وَلَا تَتَّخِذُوٓا أَيْمَانَكُمْ دَخَلًا بَيْنَكُمْ
فَتَزِلَّ قَدَمٌ بَعْدَ ثُبُوتِهَا وَتَذُوقُوا
السُّوٓءَ بِمَا صَدَدتُّمْ عَن سَبِيلِ اللَّهِ ۖ
وَلَكُمْ عَذَابٌ عَظِيمٌ ﴿٩٤﴾

95. ಅಲ್ಲಾಹನೊಂದಿಗೆ ಮಾಡಿದ ಕರಾರನ್ನು ಅಲ್ಪಲಾಭಕ್ಕಾಗಿ ಮಾರಬೇಡಿರಿ. ನೀವು ತಿಳಿದಿದ್ದರೆ, ಅಲ್ಲಾಹನ ಬಳಿಯಲ್ಲಿರುವುದು ನಿಮಗೆ ಹೆಚ್ಚು ಉತ್ತಮ.

وَلَا تَشْتَرُوا بِعَهْدِ اللَّهِ ثَمَنًا قَلِيلًا ۚ إِنَّمَا
عِندَ اللَّهِ هُوَ خَيْرٌ لَّكُمْ إِن كُنتُمْ تَعْلَمُونَ ﴿٩٥﴾

96. ನಿಮ್ಮಲ್ಲಿರುವುದೆಲ್ಲಾ ಖರ್ಚಾಗಿ ಹೋಗಲಿದೆ. ಅಲ್ಲಾಹನ ಬಳಿಯಲ್ಲಿರುವುದು ಮಾತ್ರ ಬಾಕಿ ಉಳಿದಿರುವುದು. ನಿಶ್ಚಯವಾಗಿಯೂ ನಾವು ಸಹನೆಯೊಂದಿಗೆ ಕಾರ್ಯವೆಸಗುವವರಿಗೆ ಅವರ ಪ್ರತಿಫಲವನ್ನು ಅವರ ಅತ್ಯುತ್ತಮ ಕರ್ಮಗಳಿಗನುಸಾರ ನೀಡುವೆವು.

مَا عِندَكُمْ يَنفَدُ ۖ وَمَا عِندَ اللَّهِ بَاقٍ ۗ
وَلَنَجْزِيَنَّ الَّذِينَ صَبَرُوٓا أَجْرَهُم
بِأَحْسَنِ مَا كَانُوا يَعْمَلُونَ ﴿٩٦﴾

97. ಪುರುಷನಾಗಿರಲಿ ಸ್ತ್ರೀ ಆಗಿರಲಿ ಯಾರು ಸತ್ಕರ್ಮವೆಸಗುವನೋ ಅವನು ಸತ್ಯವಿಶ್ವಾಸಿಯಾಗಿದ್ದರೆ ಅವನಿಗೆ ನಾವು ಇಹಲೋಕದಲ್ಲಿ ಪರಿಶುದ್ಧ ಜೀವನವನ್ನು ದಯಪಾಲಿಸುವೆವು ಮತ್ತು ಇಂತಹವರಿಗೆ (ಪರಲೋಕದಲ್ಲಿ) ಅವರ ಅತ್ಯುತ್ತಮ ಕರ್ಮಗಳಿಗನುಸಾರ ಪ್ರತಿಫಲ ನೀಡುವೆವು.

مَنْ عَمِلَ صَالِحًا مِّن ذَكَرٍ أَوْ أُنثَىٰ
وَهُوَ مُؤْمِنٌ فَلَنُحْيِيَنَّهُ حَيَاةً طَيِّبَةً ۖ
وَلَنَجْزِيَنَّهُمْ أَجْرَهُم بِأَحْسَنِ مَا
كَانُوا يَعْمَلُونَ ﴿٩٧﴾

98. ನೀವು ಕುರ್‌ಆನನ್ನು ಪಠಿಸಲಾರಂಭಿಸುವಾಗ ಶಪಿತ ಶೈತಾನನಿಂದ ಅಲ್ಲಾಹನ ಅಭಯ ಯಾಚಿಸಿಕೊಳ್ಳಿರಿ.[28]

فَإِذَا قَرَأْتَ الْقُرْآنَ فَاسْتَعِذْ بِاللَّهِ
مِنَ الشَّيْطَانِ الرَّجِيمِ ﴿٩٨﴾

99. ಸತ್ಯವಿಶ್ವಾಸವಿರಿಸುವವರ ಹಾಗೂ ತಮ್ಮ ಪ್ರಭುವಿನ ಮೇಲೆ ಭರವಸೆಯನ್ನಿರಿಸುವವರ ಮೇಲೆ ಅವನ ಹತೋಟಿ ಖಂಡಿತವಾಗಿಯೂ ಇಲ್ಲ.

إِنَّهُ لَيْسَ لَهُ سُلْطَانٌ عَلَى الَّذِينَ آمَنُوا
وَعَلَىٰ رَبِّهِمْ يَتَوَكَّلُونَ ﴿٩٩﴾

27. ಅರ್ಥಾತ್- ಒಬ್ಬ ವ್ಯಕ್ತಿ ಇಸ್ಲಾಮಿನ ಸತ್ಯತೆಯನ್ನು ಸಮ್ಮತಿಸಿದ ಬಳಿಕ ಕೇವಲ ನಿಮ್ಮ ಅನೀತಿಯನ್ನು ಕಂಡು ಧರ್ಮದಿಂದ ವಿಮುಖವಾಗುವಂತೆ ಆಗಬಾರದು. ಹೀಗೆ ಸತ್ಯವಿಶ್ವಾಸಿಗಳ ಕೂಟದಲ್ಲಿ ಅವನು ನೋಡಿದಂತಹ ವ್ಯಕ್ತಿಗಳು ಚಾರಿತ್ರ್ಯ ಮತ್ತು ವ್ಯವಹಾರದಲ್ಲಿ ಸತ್ಯನಿಷೇಧಿಗಳಿಗಿಂತ ಭಿನ್ನರಲ್ಲ ಎಂಬುದನ್ನು ಗಮನಿಸಿ. ಅವನು ಸತ್ಯವಿಶ್ವಾಸಿಗಳ ಕೂಟದಲ್ಲಿ ಸೇರುವುದರಿಂದ ದೂರ ಉಳಿಯುವಂತಾಗಬಾರದು.

28. ಅರ್ಥಾತ್- ನಾಲಗೆಯಿಂದ "ಅವೂದು ಬಿಲ್ಲಾಹಿ ಮಿನಶ್ಶೈತಾನಿರ್ರಜೀಮ್" ಎಂದು ಉಚ್ಚರಿಸಬೇಕೆಂದು ಮಾತ್ರವಲ್ಲ ಶೈತಾನನ ದಾರಿತಪ್ಪಿಸುವಂತಹ ಪ್ರಲೋಭನೆಗಳಿಂದ ತನ್ನನ್ನು ಸುರಕ್ಷಿತವಾಗಿರಿಸುವಂತೆ ಮನಃಪೂರ್ವಕವಾಗಿ ಅಲ್ಲಾಹನನ್ನು ಪ್ರಾರ್ಥಿಸಬೇಕು. ಏಕೆಂದರೆ ಈ ಗ್ರಂಥದಿಂದ ಮಾರ್ಗದರ್ಶನವನ್ನು ಪಡೆಯದವನು ಬೇರೆಲ್ಲಿಂದಲೂ ಅದನ್ನು ಪಡೆಯಲಾರನು. ಈ ಗ್ರಂಥದಿಂದ ಪಥಭ್ರಷ್ಟತೆಯನ್ನು ಪಡೆದವನನ್ನು ಜಗತ್ತಿನ ಬೇರಾವ ಗ್ರಂಥವೂ ಪಥಭ್ರಷ್ಟತೆಯಿಂದ ರಕ್ಷಿಸಲಾರದು.

100. ಅವನನ್ನು ತಮ್ಮ ಸಂರಕ್ಷಕನನ್ನಾಗಿ ಮಾಡಿಕೊಂಡವರ ಮೇಲೆ ಮತ್ತು ಅವನ ವಂಚನೆಗೊಳಪಟ್ಟು 'ದೇವಸಹಭಾಗಿತ್ವ' ಮಾಡುವವರ ಮೇಲೆ ಮಾತ್ರ ಅವನ ಪ್ರಭಾವವಿರುತ್ತದೆ.

إِنَّمَا سُلْطَانُهُ عَلَى الَّذِينَ يَتَوَلَّوْنَهُ
وَالَّذِينَ هُمْ بِهِ مُشْرِكُونَ ﴿١٠٠﴾

101. ನಾವು ಒಂದು 'ಸೂಕ್ತ'ದ ಸ್ಥಾನದಲ್ಲಿ ಇನ್ನೊಂದು 'ಸೂಕ್ತ'ವನ್ನು ಅವತೀರ್ಣಗೊಳಿಸಿದಾಗ ಏನನ್ನು ಅವತೀರ್ಣಗೊಳಿಸಬೇಕೆಂದು ಅಲ್ಲಾಹನೇ ಚೆನ್ನಾಗಿ ಬಲ್ಲನು-ಈ ಕುರ್‌ಆನನ್ನು ನೀವೇ ಸ್ವಯಂ ಸೃಷ್ಟಿಸುತ್ತೀರೆಂದು ಇವರು ಹೇಳುತ್ತಾರೆ. ವಾಸ್ತವದಲ್ಲಿ ಅವರಲ್ಲಿ ಅನೇಕರು ವಸ್ತುಸ್ಥಿತಿಯನ್ನು ಅರಿತಿರುವುದಿಲ್ಲ.

وَإِذَا بَدَّلْنَا آيَةً مَكَانَ آيَةٍ ۙ وَاللَّهُ
أَعْلَمُ بِمَا يُنَزِّلُ قَالُوا إِنَّمَا أَنْتَ
مُفْتَرٍ ۚ بَلْ أَكْثَرُهُمْ لَا يَعْلَمُونَ ﴿١٠١﴾

102. ವಿಶ್ವಾಸವಿರಿಸುವವರ ವಿಶ್ವಾಸವನ್ನು ಪರಿಪಕ್ವಗೊಳಿಸಲಿಕ್ಕಾಗಿಯೂ ಆಜ್ಞಾಪಾಲಕರಿಗೆ ಜೀವನದ ವ್ಯವಹಾರಗಳಲ್ಲಿ ನೇರ ಮಾರ್ಗವನ್ನು ತೋರಿಸಲಿಕ್ಕಾಗಿಯೂ ಅವರಿಗೆ ವಿಜಯ ಹಾಗೂ ಮೋಕ್ಷದ ಸುವಾರ್ತೆ ನೀಡಲಿಕ್ಕಾಗಿಯೂ ಇದನ್ನು (ರೂಹುಲ್‌ಕುದುಸ್) ಪವಿತ್ರಾತ್ಮನು ಯಥಾವತ್ತಾಗಿ ನನ್ನ ಪ್ರಭುವಿನ ಕಡೆಯಿಂದ ಅನುಕ್ರಮವಾಗಿ ಅವತೀರ್ಣಗೊಳಿಸಿದನೆಂದು ಹೇಳಿರಿ.[29]

قُلْ نَزَّلَهُ رُوحُ الْقُدُسِ مِنْ رَبِّكَ
بِالْحَقِّ لِيُثَبِّتَ الَّذِينَ آمَنُوا وَهُدًى
وَبُشْرَىٰ لِلْمُسْلِمِينَ ﴿١٠٢﴾

103. ಈ ವ್ಯಕ್ತಿಗೆ ಒಬ್ಬನು ಕಲಿಸಿಕೊಡುತ್ತಾನೆಂದು ನಿಮ್ಮ ಕುರಿತು ಇವರು ಹೇಳುತ್ತಾರೆಂದು ನಮಗೆ ಗೊತ್ತಿದೆ. ವಸ್ತುತಃ ಅವರ ಸಂಕೇತವು ಯಾರ ಕಡೆಗಿರುವುದೋ ಅವನ ಭಾಷೆ 'ಅರಬಿಯೇತರ' ಆಗಿದೆ ಮತ್ತು ಇದು ಸುಸ್ಪಷ್ಟ ಅರಬೀ ಭಾಷೆಯಾಗಿರುತ್ತದೆ.

وَلَقَدْ نَعْلَمُ أَنَّهُمْ يَقُولُونَ إِنَّمَا يُعَلِّمُهُ
بَشَرٌ ۗ لِسَانُ الَّذِي يُلْحِدُونَ إِلَيْهِ
أَعْجَمِيٌّ وَهَٰذَا لِسَانٌ عَرَبِيٌّ مُبِينٌ ﴿١٠٣﴾

104. ವಾಸ್ತವದಲ್ಲಿ ಅಲ್ಲಾಹನ ಸೂಕ್ತಗಳಲ್ಲಿ ವಿಶ್ವಾಸವಿರಿಸದವರಿಗೆ ಅಲ್ಲಾಹನು ಎಂದೆಂದಿಗೂ ಸನ್ಮಾರ್ಗದರ್ಶನ ಮಾಡುವುದಿಲ್ಲ. ಇಂತಹವರಿಗೆ ವೇದನಾಯುಕ್ತ ಯಾತನೆ ಇದೆ.

إِنَّ الَّذِينَ لَا يُؤْمِنُونَ بِآيَاتِ اللَّهِ ۙ لَا
يَهْدِيهِمُ اللَّهُ وَلَهُمْ عَذَابٌ أَلِيمٌ ﴿١٠٤﴾

105. (ಪ್ರವಾದಿಯು ಸುಳ್ಳು ಮಾತುಗಳ ಸೃಷ್ಟನೆ ಮಾಡುವುದಿಲ್ಲ) ವಾಸ್ತವದಲ್ಲಿ ಅಲ್ಲಾಹನ ಸೂಕ್ತಗಳಲ್ಲಿ ವಿಶ್ವಾಸವಿರಿಸದವರೇ ಸುಳ್ಳು ಸೃಷ್ಟನೆ ಮಾಡುತ್ತಿದ್ದಾರೆ.[30] ನಿಜಕ್ಕೂ ಅವರೇ ಸುಳ್ಳುಗಾರರು.

إِنَّمَا يَفْتَرِي الْكَذِبَ الَّذِينَ لَا يُؤْمِنُونَ
بِآيَاتِ اللَّهِ ۖ وَأُولَٰئِكَ هُمُ الْكَاذِبُونَ ﴿١٠٥﴾

---

29. 'ರೂಹುಲ್ ಕುದುಸ್'ನ ಶಬ್ದಾರ್ಥ 'ಪವಿತ್ರಾತ್ಮ' ಅಥವಾ 'ಪರಿಶುದ್ಧ ಆತ್ಮ' ಎಂದಾಗಿದೆ. ಪಾರಿಭಾಷಿಕವಾಗಿ ಹ. ಜಿಬ್‌ರೀಲ್‌ರಿಗೆ(ಅ) ಈ ಬಿರುದು ನೀಡಲಾಗಿದೆ. ಇಲ್ಲಿ ದಿವ್ಯವಾಣಿಯನ್ನು ತರುವ ದೇವಚರರ ಹೆಸರಿನ ಬದಲು ಅವರ ಬಿರುದನ್ನು ಉಪಯೋಗಿಸಿರುವುದರ ಉದ್ದೇಶ ಈ ವಾಣಿಯನ್ನು ತರುವ 'ಆತ್ಮ' ಮಾನವೀಯ ದೌರ್ಬಲ್ಯಗಳಿಂದ ಮುಕ್ತವಾಗಿದೆ. ಅದು ಬಹಳ ಪ್ರಾಮಾಣಿಕವಾಗಿ ಅಲ್ಲಾಹನ ಸಂದೇಶವನ್ನು ತಲಪಿಸುತ್ತದೆ ಎಂದು ಸಂಬೋಧಿತರಿಗೆ ಎಚ್ಚರಿಕೆ ನೀಡುವುದಾಗಿದೆ.

30. ಇನ್ನೊಂದು ರೀತಿಯಲ್ಲಿ ಇದನ್ನು ಹೀಗೆ ಭಾಷಾಂತರಿಸಬಹುದು, "ಅಲ್ಲಾಹನ ಸೂಕ್ತಗಳ ಮೇಲೆ ವಿಶ್ವಾಸವಿಡದವರು ಸುಳ್ಳಾಡುತ್ತಾರೆ."

106. ಸತ್ಯವಿಶ್ವಾಸವನ್ನು ಸ್ವೀಕರಿಸಿಕೊಂಡ ಬಳಿಕ ನಿಷೇಧಿಸುವವನು (ಒಂದು ವೇಳೆ) ನಿರ್ಬಂಧಿಸಲ್ಪಟ್ಟಿದ್ದು ಅವನ ಹೃದಯವು ಈಮಾನಿನ ಬಗ್ಗೆ ಸಂತೃಪ್ತವಾಗಿದ್ದರೆ (ಸರಿ) ಆದರೆ ಮನಸಾರೆ ಸತ್ಯನಿಷೇಧವನ್ನು ಸ್ವೀಕರಿಸಿದವನ ಮೇಲೆ ಅಲ್ಲಾಹನ ಪ್ರಕೋಪ ವಿದೆ. ಇಂತಹವರಿಗೆಲ್ಲಾ ಘೋರ ಯಾತನೆ ಇದೆ.[31]

مَنْ كَفَرَ بِاللّٰهِ مِنْۢ بَعْدِ اِيْمَانِهٖۤ اِلَّا مَنْ
اُكْرِهَ وَقَلْبُهٗ مُطْمَئِنٌّۢ بِالْاِيْمَانِ وَلٰكِنْ
مَّنْ شَرَحَ بِالْكُفْرِ صَدْرًا فَعَلَيْهِمْ
غَضَبٌ مِّنَ اللّٰهِ ۚ وَلَهُمْ عَذَابٌ عَظِيْمٌ ﴿١٠٦﴾

107. ಇದೇಕೆಂದರೆ ಅವರು ಪರಲೋಕದ ಬದಲಾಗಿ ಇಹಲೋಕ ಜೀವನವನ್ನು ಮೆಚ್ಚಿದರು. ಅಲ್ಲಾಹನು ಸತ್ಯನಿಷೇಧಿಗಳಿಗೆ ಸನ್ಮಾರ್ಗ ದರ್ಶನವನ್ನೀಯುವುದಿಲ್ಲ.

ذٰلِكَ بِاَنَّهُمُ اسْتَحَبُّوا الْحَيٰوةَ الدُّنْيَا
عَلَى الْاٰخِرَةِ ۙ وَاَنَّ اللّٰهَ لَا يَهْدِى الْقَوْمَ
الْكٰفِرِيْنَ ﴿١٠٧﴾

108. ಅಲ್ಲಾಹನು ಹೃದಯಗಳಿಗೂ ಶ್ರವಣಗಳಿಗೂ ದೃಷ್ಟಿಗಳ ಮೇಲೂ ಮುದ್ರೆ ಹಾಕಿದಂತಹವರಿವರು. ಇವರು ಅಲಕ್ಷ್ಯದಲ್ಲಿ ಮುಳುಗಿ ಬಿಟ್ಟಿದ್ದಾರೆ.

اُولٰٓئِكَ الَّذِيْنَ طَبَعَ اللّٰهُ عَلٰى قُلُوْبِهِمْ
وَسَمْعِهِمْ وَاَبْصَارِهِمْ ۚ وَاُولٰٓئِكَ
هُمُ الْغٰفِلُوْنَ ﴿١٠٨﴾

109. ಪರಲೋಕದಲ್ಲಿ ಇವರೇ ನಷ್ಟ ಹೊಂದುವವರೆಂಬುದರಲ್ಲಿ ಸಂಶಯವಿಲ್ಲ.[32]

لَا جَرَمَ اَنَّهُمْ فِى الْاٰخِرَةِ هُمُ الْخٰسِرُوْنَ ﴿١٠٩﴾

110. ಇದಕ್ಕೆ ವ್ಯತಿರಿಕ್ತವಾಗಿ ಕೆಲವರು(ಸತ್ಯವಿಶ್ವಾಸವನ್ನು ಸ್ವೀಕರಿಸಿದ್ದ ಕಾರಣಕ್ಕಾಗಿ) ಸತಾಯಿಸಲ್ಪಟ್ಟಾಗ ಅವರು ಮನೆಮಾರುಗಳನ್ನು ತೊರೆದರು, 'ವಲಸೆ' ಹೋದರು, ಅಲ್ಲಾಹನ ಮಾರ್ಗದಲ್ಲಿ ಕಷ್ಟ ಕಾರ್ಪಣ್ಯಗಳನ್ನು ಸಹಿಸಿದರು ಮತ್ತು ಸಹನೆಯಿಂದ ವರ್ತಿಸಿದರು. ಅವರ ಬಗ್ಗೆ ನಿಶ್ಚಯವಾಗಿಯೂ ನಿನ್ನ ಪ್ರಭು ಕ್ಷಮಾಶೀಲನೂ ಕರುಣೆ ತೋರುವವನೂ ಆಗಿರುತ್ತಾನೆ.

ثُمَّ اِنَّ رَبَّكَ لِلَّذِيْنَ هَاجَرُوْا مِنْۢ بَعْدِ
مَا فُتِنُوْا ثُمَّ جٰهَدُوْا وَصَبَرُوْۤا ۙ اِنَّ رَبَّكَ
مِنْۢ بَعْدِهَا لَغَفُوْرٌ رَّحِيْمٌ ﴿١١٠﴾

111. ಪ್ರತಿಯೊಬ್ಬನೂ ತನ್ನ ರಕ್ಷಣೆಯ ಚಿಂತೆಯಲ್ಲೇ ಬಿದ್ದಿರುವ, ಪ್ರತಿಯೊಬ್ಬನಿಗೂ ಅವನ ಕರ್ಮದ ಫಲವನ್ನು ಪರಿಪೂರ್ಣ ಕೊಡಲಾಗುವ ಮತ್ತು ಯಾರ ಮೇಲೂ ಕಿಂಚಿತ್ತೂ ಅಕ್ರಮವಾಗದಿರುವ ದಿನ (ಇವರೆಲ್ಲರ ತೀರ್ಮಾನವಾಗುವುದು.)

يَوْمَ تَاْتِيْ كُلُّ نَفْسٍ تُجَادِلُ عَنْ نَّفْسِهَا وَ
تُوَفّٰى كُلُّ نَفْسٍ مَّا عَمِلَتْ وَهُمْ لَا يُظْلَمُوْنَ ﴿١١١﴾

---

31. ಇದು ಆ ಕಾಲದಲ್ಲಿ ತೀವ್ರ ಸ್ವರೂಪದ ಅನ್ಯಾಯಗಳಿಗೆ ಈಡಾಗಿದ್ದ ಮುಸ್ಲಿಮರ ಕುರಿತು ಇರುವ ಸೂಕ್ತವಾಗಿದೆ. ಅವರನ್ನು ಸಹಿಸಲಸಾಧ್ಯವಾದ ಯಾತನೆಗಳ ಮೂಲಕ ಸತ್ಯನಿಷೇಧ ಕೈಗೊಳ್ಳಲು ನಿರ್ಬಂಧಿಸಲಾಗುತ್ತಿತ್ತು. ಯಾವುದಾದರೂ ಸಂದರ್ಭದಲ್ಲಿ ಅಕ್ರಮಗಳಿಂದ ನಿರ್ಬಂಧಿತರಾಗಿ ನಾಲಗೆಯಿಂದ ಸತ್ಯನಿಷೇಧದ ವಚನ ಹೊರಡಿಸಿ, ನಿಮ್ಮ ಹೃದಯದ ವಿಶ್ವಾಸ ಸತ್ಯನಿಷೇಧದಿಂದ ಮುಕ್ತವಾಗಿದ್ದರೆ ನಿಮಗೆ ಕ್ಷಮೆ ನೀಡಲಾಗುವುದು ಎಂದು ಅವರೊಡನೆ ಹೇಳಲಾಗುತ್ತಿದೆ. ಆದರೆ ಮನಃಪೂರ್ವಕವಾಗಿ ನೀವು ಸತ್ಯನಿಷೇಧವನ್ನೇ ನೆಚ್ಚಿಕೊಂಡರೆ, ಲೌಕಿಕ ಜೀವನದಲ್ಲಿ ನೀವು ಪ್ರಾಣ ಉಳಿಸಿಕೊಳ್ಳಬಹುದು. ಆದರೆ ದೇವನ ಶಿಕ್ಷೆಯಿಂದ ನೀವು ಸುರಕ್ಷಿತವಾಗಿ ಉಳಿಯಲಾರಿರಿ.

32. ಸತ್ಯವಿಶ್ವಾಸದ ಹಾದಿ ದುರ್ಗಮವಾದುದೆಂದು ಭಾವಿಸಿ ಆ ಬಗ್ಗೆ ಪಶ್ಚಾತ್ತಾಪ ಪಟ್ಟು, ತಮ್ಮ ಸತ್ಯನಿಷೇಧಿ ಅಥವಾ ಬಹುದೇವಾರಾಧಕ ಸಮುದಾಯದೊಂದಿಗೆ ಹೋಗಿ ಸೇರಿದ್ದ ಜನರ ಕುರಿತು ಈ ಮಾತು ಹೇಳಲಾಗಿದೆ.

112. ಅಲ್ಲಾಹನು ಒಂದು ನಾಡಿನ ಉಪಮೆ ಕೊಡುತ್ತಾನೆ. ಅದು ಶಾಂತಿಯೊಂದಿಗೆ ಸಂತೃಪ್ತ ಜೀವನ ಸಾಗಿಸುತ್ತಿತ್ತು ಮತ್ತು ಎಲ್ಲ ಕಡೆಗಳಿಂದಲೂ ಅದಕ್ಕೆ ಹೇರಳ ಜೀವನಾಧಾರ ದೊರಕುತ್ತಿತ್ತು. ಆಗಲೇ ಅದು ಅಲ್ಲಾಹನ 'ಕೊಡುಗೆ'ಗಳನ್ನು ನಿಷೇಧಿಸಲಾರಂಭಿಸಿತು. ಆಗ ಅಲ್ಲಾಹನು ಅದರ ನಿವಾಸಿಗಳಿಗೆ ಅವರ ದುಷ್ಕೃತ್ಯಗಳ ಸವಿಯನ್ನು ತೋರಿಸಿದುದು ಹೇಗೆಂದರೆ, ಹಸಿವೆ ಮತ್ತು ಭಯ ಅವರನ್ನು ಆವರಿಸಿದುವು.

وَضَرَبَ اللّٰهُ مَثَلًا قَرْيَةً كَانَتْ اٰمِنَةً مُّطْمَئِنَّةً يَّاْتِيْهَا رِزْقُهَا رَغَدًا مِّنْ كُلِّ مَكَانٍ فَكَفَرَتْ بِاَنْعُمِ اللّٰهِ فَاَذَاقَهَا اللّٰهُ لِبَاسَ الْجُوْعِ وَالْخَوْفِ بِمَا كَانُوْا يَصْنَعُوْنَ ﴿١١٢﴾

113. ಅವರ ಬಳಿಗೆ ಅವರ ಜನಾಂಗದಿಂದಲೇ ಓರ್ವ ರಸೂಲ್ ಬಂದರು. ಆದರೆ, ಅವರು ಅವರನ್ನು (ರಸೂಲರನ್ನು) ಸುಳ್ಳಾಗಿಸಿದರು. ಕೊನೆಗೆ ಅವರು ಅಕ್ರಮಿಗಳಾಗಿದ್ದ ಸ್ಥಿತಿಯಲ್ಲಿ ಯಾತನೆಯು ಅವರ ಮೇಲೆರಗಿತು.[33]

وَلَقَدْ جَآءَهُمْ رَسُوْلٌ مِّنْهُمْ فَكَذَّبُوْهُ فَاَخَذَهُمُ الْعَذَابُ وَهُمْ ظٰلِمُوْنَ ﴿١١٣﴾

114. ಆದುದರಿಂದ ಓ ಜನರೇ! ನೀವು ನಿಜಕ್ಕೂ ಅಲ್ಲಾಹನ ದಾಸ್ಯ-ಆರಾಧನೆ ಮಾಡುವವರಾಗಿದ್ದರೆ ಅಲ್ಲಾಹನು ನಿಮಗೆ ದಯಪಾಲಿಸಿರುವ 'ಧರ್ಮಸಮ್ಮತ' ಹಾಗೂ ಶುದ್ಧವಾದ ಆಹಾರವನ್ನು ಉಣ್ಣಿರಿ ಮತ್ತು ಅಲ್ಲಾಹನ 'ಕೊಡುಗೆ'ಗೆ ಕೃತಜ್ಞತೆ ಸಲ್ಲಿಸಿರಿ.

فَكُلُوْا مِمَّا رَزَقَكُمُ اللّٰهُ حَلٰلًا طَيِّبًا ۪ وَّاشْكُرُوْا نِعْمَتَ اللّٰهِ اِنْ كُنْتُمْ اِيَّاهُ تَعْبُدُوْنَ ﴿١١٤﴾

115. ಅಲ್ಲಾಹನು ನಿಮಗೆ 'ನಿಷಿದ್ಧ'ಗೊಳಿಸಿದವುಗಳು ಇವು- ಶವ, ರಕ್ತ, ಹಂದಿಮಾಂಸ ಮತ್ತು ಅಲ್ಲಾಹನ ಹೊರತು ಇತರರ ನಾಮೋಚ್ಚಾರ ಮಾಡಲ್ಪಟ್ಟ ಪ್ರಾಣಿ. ಆದರೆ ಯಾರಾದರೂ ಹಸಿವೆಯಿಂದ ವಿವಶನಾಗಿ, ಅಲ್ಲಾಹನ ಕಾನೂನನ್ನು ಉಲ್ಲಂಘಿಸುವ ಅಪೇಕ್ಷೆ ಇಲ್ಲದೆ, ಅತ್ಯಾವಶ್ಯಕತೆಯ ಮೇರೆ ಮೀರದೆ, ಆ ವಸ್ತುಗಳಿಂದ ಒಂದಿಷ್ಟು ಸೇವಿಸಿದರೆ, ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

اِنَّمَا حَرَّمَ عَلَيْكُمُ الْمَيْتَةَ وَالدَّمَ وَلَحْمَ الْخِنْزِيْرِ وَمَاۤ اُهِلَّ لِغَيْرِ اللّٰهِ بِهٖ ۚ فَمَنِ اضْطُرَّ غَيْرَ بَاغٍ وَّلَا عَادٍ فَاِنَّ اللّٰهَ غَفُوْرٌ رَّحِيْمٌ ﴿١١٥﴾

116. ಇದು 'ಧರ್ಮಸಮ್ಮತ', ಇದು 'ನಿಷಿದ್ಧ'[34] ಎಂದು ನಿಮ್ಮ ನಾಲಿಗೆಗಳು ಸುಳ್ಳು ವಿಧಿಗಳನ್ನು ಹೇಳುತ್ತಿವೆ. ಇಂತಹ ವಿಧಿಗಳನ್ನು

وَلَا تَقُوْلُوْا لِمَا تَصِفُ اَلْسِنَتُكُمُ الْكَذِبَ هٰذَا حَلٰلٌ وَّهٰذَا حَرَامٌ لِّتَفْتَرُوْا عَلَى

33. ಹ. ಇಬ್ನ್ ಅಬ್ಬಾಸ್‌ರ(ರ) ಪ್ರಕಾರ ಇಲ್ಲಿ ಹೆಸರೆತ್ತದೆ ಸೂಚ್ಯವಾಗಿ ಮಕ್ಕಾದ ಕುರಿತೇ ಈ ಮಾತು ಹೇಳಲಾಗಿದೆ. ಇಲ್ಲಿ ಪ್ರಸ್ತಾಪಿಸಲಾಗಿರುವ ಭಯ ಮತ್ತು ಹಸಿವೆಯ ಸಂಕಷ್ಟವೆಂದರೆ ಪ್ರವಾದಿವರ್ಯರ(ಸ) ಪ್ರವಾದಿತ್ವದ ನಂತರ ಒಂದು ಅವಧಿಯ ತನಕ ಮಕ್ಕಾದ ಜನರಿಗೆ ಬಾಧಿಸಿದ ಬರವಾಗಿದೆ.

34. ಧರ್ಮಸಮ್ಮತ ಅಥವಾ ನಿಷಿದ್ಧಗೊಳಿಸುವ ಹಕ್ಕು ಯಾರಿಗೂ ಇಲ್ಲ ಎಂದು ಈ ಸೂಕ್ತ ಸ್ಪಷ್ಟಪಡಿಸುತ್ತದೆ. ಸಿಂಧು-ಅಸಿಂಧುಗಳ ಬಗ್ಗೆ ತೀರ್ಮಾನ ಮಾಡುವಂತಹ ಧೈರ್ಯವನ್ನು ತೋರುವವನು ವಾಸ್ತವದಲ್ಲಿ ಸೀಮೋಲ್ಲಂಘನೆ ಮಾಡುವವನಾಗಿದ್ದಾನೆ. ದೇವಕಾನೂನನ್ನು ಆಧಾರವಾಗಿರಿಸಿ ಅದರ ಆದೇಶಗಳ ಆಧಾರದಲ್ಲಿ ಇದು ಸಿಂಧು, ಇದು ಅಸಿಂಧು ಎಂದು ತೀರ್ಮಾನ ಮಾಡುವುದಿದ್ದರೆ ಅಡ್ಡಿಯಿಲ್ಲ. ಸ್ವತಂತ್ರವಾಗಿ ಸಿಂಧು-ಅಸಿಂಧುಗಳನ್ನು ಗೊತ್ತು ಪಡಿಸಿಕೊಳ್ಳುವುದನ್ನು ಅಲ್ಲಾಹನ ಮೇಲೆ

اللّٰهِ الْكَذِبَ ؕ اِنَّ الَّذِيْنَ يَفْتَرُوْنَ عَلَى
اللّٰهِ الْكَذِبَ لَا يُفْلِحُوْنَ ؕ﴿۱۱۶﴾

ಹೇಳಿ ಅಲ್ಲಾಹನ ಮೇಲೆ ಸುಳ್ಳು ಸೃಷ್ಟಿಸಬೇಡಿರಿ. ಅಲ್ಲಾಹನ
ಮೇಲೆ ಸುಳ್ಳನ್ನು ಹೊರಿಸುವವರು ಎಂದಿಗೂ ಯಶಸ್ವಿಗಳಾಗು
ವುದಿಲ್ಲ.

مَتَاعٌ قَلِيْلٌ ۪ وَّلَهُمْ عَذَابٌ اَلِيْمٌ ﴿۱۱۷﴾

117. ಲೌಕಿಕ ಸುಖ ಭೋಗ ಕೇವಲ ಅಲ್ಪಾವಧಿಯದು. ಕೊನೆಗೆ
ಅವರಿಗೆ ವೇದನಾತ್ಮಕ ಯಾತನೆ ಇರುವುದು.

وَعَلَى الَّذِيْنَ هَادُوْا حَرَّمْنَا مَا قَصَصْنَا
عَلَيْكَ مِنْ قَبْلُ ۚ وَمَا ظَلَمْنٰهُمْ وَلٰكِنْ
كَانُوْۤا اَنْفُسَهُمْ يَظْلِمُوْنَ ﴿۱۱۸﴾

118. ನಾವು ನಿಮ್ಮೊಡನೆ ಈ ಮುಂಚೆ ಪ್ರಸ್ತಾಪಿಸಿದ ವಸ್ತುಗಳನ್ನು
ಮುಖ್ಯವಾಗಿ ಯಹೂದಿಯರಿಗೆ ನಿಷಿದ್ಧಗೊಳಿಸಿದ್ದೆವು. ಇದು
ಅವರ ಮೇಲೆ ನಮ್ಮ ಅಕ್ರಮವಾಗಿರಲಿಲ್ಲ. ನಿಜವಾಗಿ ಅವರೇ
ಸ್ವತಃ ತಮ್ಮ ಮೇಲೆ ಅಕ್ರಮವೆಸಗಿಕೊಳ್ಳುತ್ತಿದ್ದರು.

ثُمَّ اِنَّ رَبَّكَ لِلَّذِيْنَ عَمِلُوا السُّوْٓءَ بِجَهَالَةٍ
ثُمَّ تَابُوْا مِنْۢ بَعْدِ ذٰلِكَ وَاَصْلَحُوْۤا اِنَّ
رَبَّكَ مِنْۢ بَعْدِهَا لَغَفُوْرٌ رَّحِيْمٌ ﴿۱۱۹﴾

119. ಆದರೆ ಅಜ್ಞಾನದಿಂದಾಗಿ ದುಷ್ಕರ್ಮಗಳನ್ನು ಮಾಡಿ ಅನಂತರ
ಪಶ್ಚಾತ್ತಾಪ ಪಟ್ಟು ತಮ್ಮ ಕರ್ಮಗಳನ್ನು ಸರಿಪಡಿಸಿಕೊಂಡರೆ
ನಿಶ್ಚಯವಾಗಿಯೂ ಪಶ್ಚಾತ್ತಾಪ ಮತ್ತು ಸಂಸ್ಕಾರದ ಅನಂತರ
ನಿಮ್ಮ ಪ್ರಭು ಅವರ ಮೇಲೆ ಕ್ಷಮಾಶೀಲನೂ ಕರುಣಾನಿಧಿಯೂ
ಆಗಿರುತ್ತಾನೆ.

اِنَّ اِبْرٰهِيْمَ كَانَ اُمَّةً قَانِتًا لِّلّٰهِ حَنِيْفًا ؕ
وَلَمْ يَكُ مِنَ الْمُشْرِكِيْنَ ﴿۱۲۰﴾

120. ವಾಸ್ತವದಲ್ಲಿ ಇಬ್‌ರಾಹೀಮ್ ಸ್ವಯಂ ತಾನೇ ಒಂದು
ಸಮುದಾಯವಾಗಿದ್ದರು. ಅಲ್ಲಾಹನ ಆಜ್ಞಾನುಸಾರಿ ಮತ್ತು
ಏಕನಿಷ್ಠ(ರಾಗಿದ್ದರು.) ಅವರೆಂದೂ 'ಬಹುದೇವವಿಶ್ವಾಸಿ'
ಆಗಿರಲಿಲ್ಲ.

شَاكِرًا لِّاَنْعُمِهٖ ؕ اِجْتَبٰىهُ وَهَدٰىهُ اِلٰى
صِرَاطٍ مُّسْتَقِيْمٍ ﴿۱۲۱﴾

121. ಅಲ್ಲಾಹನ ಕೊಡುಗೆಗಳಿಗೆ ಕೃತಜ್ಞತೆ ಸಲ್ಲಿಸುವವರಾಗಿದ್ದರು.
ಅಲ್ಲಾಹನು ಅವರನ್ನು ಆಯ್ದುಕೊಂಡನು ಮತ್ತು ನೇರ ಮಾರ್ಗ
ವನ್ನು ತೋರಿಸಿದನು.

وَاٰتَيْنٰهُ فِى الدُّنْيَا حَسَنَةً ؕ وَاِنَّهٗ فِى
الْاٰخِرَةِ لَمِنَ الصّٰلِحِيْنَ ؕ﴿۱۲۲﴾

122. ನಾವು ಇಹಲೋಕದಲ್ಲಿ ಅವರಿಗೆ ಒಳಿತನ್ನು ದಯಪಾಲಿಸಿದೆವು
ಮತ್ತು ಪರಲೋಕದಲ್ಲಿ ಅವರು ನಿಶ್ಚಯವಾಗಿಯೂ ಸಜ್ಜನರ
ಲ್ಲಾಗಿರುವರು.

ಸುಳ್ಳಾರೋಪ ಹೊರಿಸುವುದು ಎಂದು ಹೇಳಲಾಗಿದೆ. ಏಕೆಂದರೆ ಅಲ್ಲಾಹನ ಗ್ರಂಥದ ಆಧಾರದಿಂದ ಮುಕ್ತವಾಗಿ ಅವನು ಕೊಡುವ ಆದೇಶದಲ್ಲಿ ಎರಡು ಅಂಶಗಳಿರಲು ಸಾಧ್ಯ. ಒಂದೋ ತಾನು ಯಾವುದನ್ನು ಸಿಂಧು ಅಥವಾ ಅಸಿಂಧುವೆಂದು ಹೇಳುತ್ತಿದ್ದೇನೋ ಅದನ್ನು ಅಲ್ಲಾಹನೇ ಸಿಂಧು-ಅಸಿಂಧುಗೊಳಿಸಿದ್ದಾನೆ ಎಂದು ಅವನು ಹೇಳುತ್ತಾನೆ. ಇಲ್ಲವೇ ಅಲ್ಲಾಹನು, ಧರ್ಮಸಮ್ಮತ ಮತ್ತು ನಿಷಿದ್ಧ ಗೊಳಿಸುವಂತಹ ಕರ್ತವ್ಯದಿಂದ ಮುಕ್ತನಾಗಿ ಮನುಷ್ಯನನ್ನು ತನ್ನಿಚ್ಛೆಯ ಕಾನೂನು ರಚಿಸಲು ಸ್ವತಂತ್ರವಾಗಿ ಬಿಟ್ಟು ಬಿಡುತ್ತಾನೆ ಎಂದು ಹೇಳುತ್ತಾನೆ. ಈ ಪೈಕಿ ಅವನು ಯಾವುದನ್ನು ವಾದಿಸಿದರೂ ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುವುದಕ್ಕೆ ಸಮಾನವಾಗಿದೆ.

123. ಅನಂತರ ನೀವು ಏಕನಿಷ್ಠರಾಗಿ ಇಬ್‌ರಾಹೀಮರ ಪಥದಲ್ಲಿ ನಡೆಯಲಿಕ್ಕಾಗಿ ನಾವು ನಿಮ್ಮ ಕಡೆಗೆ 'ದಿವ್ಯವಾಣಿ' ಕಳುಹಿಸಿದೆವು ಮತ್ತು ಅವರು 'ಬಹುದೇವವಿಶ್ವಾಸಿ'ಗಳಲ್ಲಾಗಿರಲಿಲ್ಲ.

ثُمَّ اَوۡحَيۡنَاۤ اِلَيۡكَ اَنِ اتَّبِعۡ مِلَّةَ اِبۡرٰهِيۡمَ
حَنِيۡفًا ؕ وَمَا كَانَ مِنَ الۡمُشۡرِكِيۡنَ ﴿۱۲۳﴾

124. 'ಸಬ್ತ್'ನ ವಿಷಯ, ಅದನ್ನು ನಾವು ಅದರ ವಿಧಿಗಳ ಕುರಿತು ಭಿನ್ನಾಭಿಪ್ರಾಯ ತಾಳಿದವರ ಮೇಲೆ ಹೇರಿದ್ದೆವು ಮತ್ತು ನಿಶ್ಚಯವಾಗಿಯೂ ಅವರು ಭಿನ್ನಾಭಿಪ್ರಾಯ ಹೊಂದಿದ್ದ ಎಲ್ಲ ವಿಷಯಗಳನ್ನು ನಿಮ್ಮ ಪ್ರಭು ಪುನರುತ್ಥಾನ ದಿನ ತೀರ್ಮಾನಿಸಿ ಬಿಡುವನು.

اِنَّمَا جُعِلَ السَّبۡتُ عَلَى الَّذِيۡنَ اخۡتَلَفُوۡا
فِيۡهِ ؕ وَاِنَّ رَبَّكَ لَيَحۡكُمُ بَيۡنَهُمۡ يَوۡمَ
الۡقِيٰمَةِ فِيۡمَا كَانُوۡا فِيۡهِ يَخۡتَلِفُوۡنَ ﴿۱۲۴﴾

125. ಓ ಪೈಗಂಬರರೇ, ಯುಕ್ತಿ ಹಾಗೂ ಸದುಪದೇಶದ ಮೂಲಕ ನಿಮ್ಮ ಪ್ರಭುವಿನ ಮಾರ್ಗಕ್ಕೆ ಜನರನ್ನು ಆಹ್ವಾನಿಸಿರಿ ಮತ್ತು ಜನರೊಂದಿಗೆ ಅತ್ಯುತ್ತಮ ರೀತಿಯಿಂದ ವಾದಿಸಿರಿ. ಯಾರು ಅವನ ಮಾರ್ಗದಿಂದ ಭ್ರಷ್ಟನಾಗಿದ್ದಾನೆ ಮತ್ತು ಯಾರು ನೇರ ಮಾರ್ಗದಲ್ಲಿದ್ದಾನೆಂಬುದನ್ನು ನಿಮ್ಮ ಪ್ರಭುವೇ ಚೆನ್ನಾಗಿ ಬಲ್ಲನು.

اُدۡعُ اِلٰى سَبِيۡلِ رَبِّكَ بِالۡحِكۡمَةِ وَالۡمَوۡعِظَةِ
الۡحَسَنَةِ وَجَادِلۡهُمۡ بِالَّتِىۡ هِىَ اَحۡسَنُ ؕ اِنَّ
رَبَّكَ هُوَ اَعۡلَمُ بِمَنۡ ضَلَّ عَنۡ سَبِيۡلِهٖ
وَهُوَ اَعۡلَمُ بِالۡمُهۡتَدِيۡنَ ﴿۱۲۵﴾

126. ನೀವು ಪ್ರತೀಕಾರವೆಸಗುವುದಿದ್ದರೆ ನಿಮ್ಮ ಮೇಲೆ ಅತಿರೇಕವೆಸಗಲಾಗಿದ್ದಷ್ಟು ಮಾತ್ರ ಎಸಗಿರಿ. ಆದರೆ, ನೀವು ತಾಳ್ಮೆ ವಹಿಸಿದರೆ ನಿಶ್ಚಯವಾಗಿಯೂ ಇದು ಸಹನಶೀಲರಿಗೆ ಅತ್ಯುತ್ತಮ.

وَاِنۡ عَاقَبۡتُمۡ فَعَاقِبُوۡا بِمِثۡلِ مَا عُوۡقِبۡتُمۡ
بِهٖ ؕ وَلَئِنۡ صَبَرۡتُمۡ لَهُوَ خَيۡرٌ لِّلصّٰبِرِيۡنَ ﴿۱۲۶﴾

127. ಓ ಪೈಗಂಬರರೇ, ಸಹನೆಯೊಂದಿಗೆ ಕಾರ್ಯವೆಸಗುತ್ತಲೇ ಸಾಗಿರಿ ಮತ್ತು ನಿಮ್ಮ ಈ ಸಹನೆ ಅಲ್ಲಾಹನ ಅನುಗ್ರಹದಿಂದಲೇ ಇದೆ. ಅವರ ಚಟುವಟಿಕೆಗಳ ಬಗ್ಗೆ ಖೇದಿಸಬೇಡಿರಿ ಮತ್ತು ಅವರ ಕುತಂತ್ರಗಳಿಂದ ಧೈರ್ಯಗುಂದಬೇಡಿರಿ.

وَاصۡبِرۡ وَمَا صَبۡرُكَ اِلَّا بِاللّٰهِ وَلَا تَحۡزَنۡ
عَلَيۡهِمۡ وَلَا تَكُ فِىۡ ضَيۡقٍ مِّمَّا يَمۡكُرُوۡنَ ﴿۱۲۷﴾

128. ನಿಶ್ಚಯವಾಗಿಯೂ ಅಲ್ಲಾಹನು ದೇವಭಯದೊಂದಿಗೆ ವರ್ತಿಸುವವರ ಹಾಗೂ ಸೌಜನ್ಯ ನೀತಿಯನ್ನನುಸರಿಸುವವರ ಸಂಗಡ ವಿದ್ದಾನೆ.

اِنَّ اللّٰهَ مَعَ الَّذِيۡنَ اتَّقَوْا وَّالَّذِيۡنَ هُمۡ
مُّحۡسِنُوۡنَ ﴿۱۲۸﴾